ಯಕ್ಷಗಾನ

ರತಿಕಲ್ಯಾಣ

★

ಉಡುಪಿ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ಶ್ರೀಃ

ಯಕ್ಷಗಾನ

ರತಿಕಲ್ಯಾಣ

★

ಹನ್ನೆರಡನೆಯ ಅಚ್ಚು: ಶಾ. ಶಕ ೧೮೭೯

ಉಡುಪಿ

ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ

ರೂ. ೦.೨೫

ಪಾತ್ರಗಳ ವಿವರ

ಶ್ರೀಕೃಷ್ಣ	ಮೇಘಸ್ತನಿ
ರುಕ್ಮಿಣೀದೇವಿ	ಮೇಘಾಸುರ
ದ್ರೌಪದೀದೇವಿ	ಕೌಂಡ್ಲಿಕ
ಕಮಲಭೂಪ	ಮನ್ಮಥ
ರತಿದೇವಿ	ಈಶ್ವರ
ಅರ್ಜುನ	ಬ್ರಹ್ಮ
ಭೀಮಸೇನ	ಬಲರಾಮ
ಧರ್ಮರಾಯ	ಚಂಡಿರೂಪಿ (ದ್ರೌಪದಿ)
ಹನುಮಂತ	

ಗರುಡ, ದ್ವಾರಪಾಲಕರು, ಚಾರಕರು.

Yakshagana Ratikalyana

ಶ್ರೀಃ



॥ ಶ್ರೀಗೋಪಾಲಕೃಷ್ಣಾಯ ನಮಃ ॥

ಶ್ರೀಮನ್ಮಹಾಭಾರತದೊಳಗಣ

ಯಕ್ಷಗಾನ ರತಿಕಲ್ಯಾಣ

ಶಾರ್ದೂಲವಿಕ್ರೀಡಿತಂ

ಕೃಷ್ಣಂ ಶ್ರೀಯದುವಂಶಮೌಕ್ತಿಕಮಣಿಂ ಕೃಷ್ಣಾಂ ಪುರಸ್ಕೃತ್ಯ ತಾಂ
ಕಾರ್ಷ್ಣೇಃ ಶ್ರೀರತಿಪಾಣಿಪೀಡನಕರಂ ಸೋಽಷ್ಣೀಷಭೂಪಾದೃತಮ್ ।
ಜಿಷ್ಣುಂ ಭೀಷ್ಮಸುತಾಖಿಲೇಷ್ಟವರದಂ ಧೃಷ್ಣುಂ ಜಗತ್ಪಾಲಕಂ
ಜಿಷ್ಣುಪ್ರೀತಿವಿವರ್ಧನಂ ಸುಖತನುಂ ವಿಷ್ಣುಂ ಭಜೇ ಸರ್ವದಾ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಧರಣಿಪತಿ ಜನಮೇಜಯಂಗಾ । ದರದಿ ವೈಶಂಪಾಯನಾಖ್ಯನು । ವರ ಮಹಾಭಾರತಚರಿತ್ರೆಯು । ನೊರೆವುತಿರಲು ॥ ೧ ॥ ಎರಗಿ ಪುನರಪಿ ಕೇಳ್ದ ಋಷಿಯೊಳು । ಸರಸಿರುಹದಳನಯನ ತನ್ನಯ । ತರಳ ಮನ್ಮಥನಿಂಗೆ ಲಗ್ನವ । ವಿರಚಿಸುವಡೆ ॥ ೨ ॥ ತರುಣಿಮಣಿ ದ್ರೌಪದಿಯು ಮನದಲಿ । ಸ್ಮರಿಸುತಾಕೆಯು ಮುಖದೊಳಬಲೆಯು । ನರಸಿ ವಿಭವದಿ ಪರಿಣಯುವ ರಚಿ । ಸಿರುವ ಕತೆಯು ॥ ೩ ॥ ಒಂದುಳಿಯದೆನಗದನು ವಿವರದೊ । ಳಿಂದು ನೀ ತಿಳು ಹೆನುತ ಬೆಸಗೊಳ । ಲಂದು ಮುನಿಪತಿ ಪೇಳ್ದ ಶಶಿಕುಲ । ನಂದನಂಗೆ ॥ ೪ ॥

ವಾರ್ಧಿಕ

ಧರಣಿಪತಿ ಲಾಲಿಸೈ ಪೂರ್ವದ ಕಥಾಮೃತವ । ಹರುಷದೊಳ್ ನಿನ ಗೊರಿವೆ ವಸುಧೆಗತಿ ಶ್ರೇಷ್ಠವಹ । ಕರಿಪುರವನಖಿಳ ವೈಭವದಿ ನಿಮ್ಮಯ

ಕುಲಜರಾಳುತತಿ ತೋಷದಿಂದ ॥ ಇರುತಿರಲು ದುರ್ಯೋಧನಾಖ್ಯ ದಾಯಾದ್ಯನು । ತ್ಸರದಿ ಕಪಟದ್ಯೂತವನ್ನಾಡಿ ಧರೆಯನಪ । ಹರಿಸುತ್ತ ಪಾಂಡವರ ದುರ್ಧರಾಜ್ಞೆಯ ಗೆಯ್ದು ಕಾನನಕೆ ಕಳುಹಿಸಿದನು ॥ ೧ ॥

ಭಾಮಿನಿ

ಹರಿದಯದಿ ವನದೊಳಗೆ ಪಾಂಡವ । ರರಸರೈವರು ದ್ರೌಪದಿಯು ಸಹಿ । ತಿರದೆ ವನವಾಸವನು ಮುಗಿಸಿದರಮಿತ ಸೌಖ್ಯದಲಿ ॥ ವರುಷವಜ್ಞಾತವನು ಕಳೆವುತ । ಧರಣಿಗೋಸುಗ ಕೌರವಾದ್ಯರ । ಧುರದಿ ಸಂಹರಿಸಲ್ಕೆ ಧರ್ಮಜ ಗಾಯ್ತು ಪಟ್ಟವದು ॥ ೧ ॥

ರಾಗ ಭೈರವಿ ಝಂಪೆತಾಳ

ವಸುಮತೀಶನೆ ಕೇಳು । ಕುಶಲದಲಿ ಪಾಂಡವರು । ವಸುಧೆಯನು ಪಾಲಿಸುತ । ಲೆಸೆದರವರಂದು ॥ ೧ ॥ ಇತ್ತ ಕೌಂತೇಯರಿರ । ಲತ್ತ ಹರಿ ದ್ವಾರಕಾ । ಪತ್ತನದೊಳೊಪ್ಪಿರ್ದ । ನಾಪ್ತಜನ ಸಹಿತ ॥ ೨ ॥ ಭೂರಿ ಭಾಗ್ಯದೊಳಿರಲು । ಮಾರಾದಿ ನಂದನರು । ನೀರಜಾಪ್ತನ ತೆರದಿ । ರಾರಾಜಿಸಿದರು ॥ ೩ ॥ ಭರಿತ ವಿಭವದಿ ಯಾದ । ವರ ಗಡಣದಿಂದ ಹಲ । ಧರನೊಡನೆ ಮೆರೆದಿರ್ದ ಕರುಣಸಾಗರನು ॥ ೪ ॥ ಸಿರಿದೇವಿ ಮೊದಲಾದ । ತರುಣಿಯರನೊಡಗೊಂಡು । ತರಣಿಪ್ರಕಾಶದೊಳು । ಮುರಮಥನನಿರ್ದ ॥ ೫ ॥

ಭಾಮಿನಿ

ಪರಮಪಾವನವೆನಿಪ ದ್ವಾರಕೆ । ಪುರವರದಿ ಶ್ರೀವಾಸುದೇವನು । ಪರಿಪರಿಯ ಪಾಠಕರ ಗಡಣದಿ ಸಭೆಯೊಳೊಪ್ಪಿರಲು ॥ ಸರಸಿಜಾಯತನೇತ್ರೆ ರುಕ್ಮಿಣಿ । ತರುಣಿಯರ ಮೇಳದಲಿ ಬಂದಾ । ಗರುಡಗಮನನ ಪದಕೆರಗಲುಪಚರಿಸುತಿಂತೆಂದ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಮಾನಿನಿ ರುಕ್ಮಿಣಿಯೇನು ಕಾರಣ ಬಂದೆ । ನೀನತಿ ದುಗುಡದಿಂದ ॥ ಸಾನುರಾಗದೊಳು ಬಂದೆರಗಿದ ಹದನವಿ । ದೇನೆಂದು ಬೆಸಗೊಂಡನು ॥ ೧ ॥ ಎರೆಯ ಲಾಲಿಪುದು ನಾನೊರೆಯುವ ವಚನವ । ಕರುಣದಿಂದೀಗ ನೀನು ॥ ಹರುಷದಿಂದೆನ್ನಯ ತರಳ ಮನ್ಮಥಗೇಕೆ । ಪರಿಣಯವೆಸಗಲಿಲ್ಲ ॥ ೨ ॥ ಸರಸಿಜಗಂಧಿ ನೀ ಸುಮ್ಮನೆ ಚಿಂತಿಸ । ದಿರು ದಿನವೆಂಟರಲಿ ॥ ತರಳೆಯ

ಪುಡುಕಿ ತಂದುಣಾಗ ಕಂದರ್ಪಗೆ। ವಿರಚಿಪೆ ಮದುವೆಯನು ॥ ೩ ॥ ಎನ ಲೆಂದಳೆಲೆ ನೀರ ನೀನೆಂದ ಮಾತಿನ। ಘನ ಭರವಸೆಯೆನಗೆ ॥ ಇನಿತಿಲ್ಲವೆನಲು ಚಕ್ರಾಂಕಿತ ನುಡಿದನು । ವಿನಯದೊಳಬಲೆಯೊಳು ॥ ೪ ॥ ಕುಕ್ಷಿಯೊಳೀರೇಳು ಲೋಕವ ಧರಿಸಿಹ। ದಕ್ಷ ತಾನಾಗಿರುವೆ ॥ ಈ ಕ್ಷಣ ನಿನ್ನಪೇಕ್ಷೆಯ ಸಲಿಸುವೆನೆನೆ। ಪಕ್ಷಿವಾಹನಗೆಂದಳು ॥ ೫ ॥ ಕರುಣಾಬ್ಧಿ ಕೇಳು ನೀನುಸಿರಿದ ಮಾತಿದು। ನಿರುತವೊ ಪುಸಿಯೋ ಪೇಳು ॥ ಸ್ಮರನಿಗೆ ತಕ್ಕಂಥ ವಧುವೆಲ್ಲಿರುವಳೊ ನಾ। ನರಿಯೆನೀ ವೈವಾಹವ ॥ ೬ ॥ ದ್ವಿರದಗಾಮಿನಿ ನೀನು ಮನೆಯೊಳಗಿರು ಪಂಚ। ಶರನಿಗೆ ಯೋಗ್ಯವಾದ ॥ ವರಕನ್ಯಾರತುನವೆಲ್ಲಿರ್ದರು ತರಿಸಿ ನಾ। ಭರದಿ ಲಗ್ನವ ಮಾಳ್ಪೆನು ॥ ೭ ॥ ಪದುಮನಾಭನೆ ಕೇಳು ನೀ ನುಡಿದಪಥಿಯೊಳ್। ಮದುವೆಯ ಮಾಡದಿರೆ ॥ ಪದಿನಾರು ಸಾಸಿರ ಸತಿಯರೊಡನೆ ನಿಮ್ಮ। ಪಡವಗಲುವೆನೆಂದಳು ॥ ೮ ॥ ತರುಣಿಯೆಂದುದ ಕೇಳಿ ಗೋವಿಂದ ಖಂತಿಯೊ। ಳರುಹಿದನವಳೊಡನೆ ॥ ಭರದಿ ಲಗ್ನವ ಮಾಡದಿರೆ ನಿಮ್ಮೆಲ್ಲರ ಸ್ನೇಹ। ತೊರೆದಗಲುವೆನೆಂದನು ॥ ೯ ॥

ವಾರ್ಧಿಕ

ಧರಣಿಪತಿ ಲಾಲಿಸೈ ಮುರಮಥನನೀ ತೆರದಿ । ತರುಣಿಯರೊಳತಿ ಪಂಥವೆರಸಿ ವಿನಯದಿ ಸ್ವಾದು। ತರದ ಭೋಜನಗೆಯ್ದು ಹರುಷದಲಿ ಸ್ಮರಿಸಿದನು ತ್ವರಿತದಿಂ ವಿನತೆಸುತನ ॥ ಅರಿವುತವನಾ ಕ್ಷಣದಿ ಬರೆ ವಾಸುದೇವನುಪ। ಚರಿಸುತಾತನ ಪೆಗಲನಿರದೇರಿ ಲಗ್ನಮಂ । ವಿರಚಿಸುವೆನೆಂದೆನುತ ಧರಣಿಪರ ಭವನಗಳನರಸುತಲಿ ನಡೆತಂದನು ॥ ೧ ॥

ರಾಗ ಮಾರವಿ ಏಕತಾಳ

ಧರಣಿಪ ಕೇಳೈ ಹರಿಯಿಾ ಪರಿಯಲಿ । ಭರದಿಂ ಗರುಡನಲಿ ॥ ಹರುಷದಿ ಕುಳಿತಾ ಕ್ಷಣ ನಡೆದನು ತಾ। ದರಧುರ ಶೌರ್ಯದಲಿ ॥ ೧ ॥ ಅಂಗ ವಂಗ ಕಾಳಿಂಗ ಕರ್ನಾಟಕ। ವಿಂಗಡದರಮನೆಯ ॥ ಹಿಂಗದೆ ತಾನೀ ಪರಿಯೊಳಗರಸಿದ। ಸಂಗಡಿಗರು ಸಹಿತ ॥ ೨ ॥ ಬಂದನು ನಾನಾ ದೇಶದ ರಾಜರ। ಮಂದಿರವನು ಕಳೆದು ॥ ಹೊಂದದೆ ಕಾರ್ಯವು ಮುಂದಕೆ ಬರುತಿರೆ। ಸಂದುದು ದಿನವಾರು ॥ ೩ ॥ ಇಂತೀ ಪರಿಯಲಿ ಪುಡುಕುತ ಬರೆ ಶ್ರೀ। ಕಾಂತನು ಮನ್ಮನದಿ ॥ ಎಂತೀ ಕೆಲಸವು ಘಟಿಸುವುದೆನುತಲಿ। ಚಿಂತಿಸಿದನು ಮನದಿ ॥ ೪ ॥

ರಾಗ ಸಾಂಗತ್ಯ ರೂಪಕತಾಳ

ಹರ ಹರಾ ಪಟ್ಟದರಸಿ ರುಕ್ಮಿಣಿಯೊಳೇಕೆ । ಬರಿದೆ ಪಂಥವನೆಸಗಿದೆನು ॥ ಸ್ಮರಗೆ ವಿವಾಹವ ವಿರಚಿಸಲಾರದೀ । ಪರಿಯಿಂದ ತೊಳಲುವುದಾಯ್ತು ॥ ೧ ॥ ಉದಯವಾಗಲು ನಾಳೆ ಸತಿಯರಗಲುವರೀ । ವಿಧವನಿನ್ನಾರೊಳು ಪೇಳ್ವೆ ॥ ವಿಧಿವಶವಲ್ಲದೆ ಬೇರಿಲ್ಲವೆನುತಲಿ । ಮದನಜನಕನಳಲಿದನು ॥ ೨ ॥ ನರಲೋಕದವರಿಂಗೆ ಹರಿಯು ನಾನೆಂದೆಂಬ । ಬಿರುದ ತೋರಿಸಲವತರಿಸಿ ॥ ಪರರಿಗೇನೊಂದುಪಕಾರ ಗೆಯ್ಯದರಿಂದ । ಲರಸುವುದಾಯ್ತು ಕನ್ನಿಕೆಯ ॥ ೩ ॥ ದುರುಳ ದುಶ್ಯಾಸನ ದ್ರೌಪದಿಗವಮಾನ । ವಿರಚಿಸಲಾಗ ಮಾನಿನಿಯ ॥ ಸೆರಗನು ಪಿಡಿದೆಳೆಯಲು ಸಭೆಯೊಳಗೆನ್ನ । ಸ್ಮರಿಸಿದಳಧಿಕ ಭಕ್ತಿಯಲಿ ॥ ೪ ॥ ಸೀರೆಗಕ್ಷಯವಿತ್ತು ಸಲಹಿದೆನಿಂದೆಮ್ಮ । ಮಾರನ ಲಗ್ನಕೆನ್ನಿಂದ ॥ ತೀರದೆ ತೊಳಲಿದೆನಿಂದಾಕೆ ಬರಲೆಂದಾ । ವಾರಿಜಾಕ್ಷಿಯ ಸ್ಮರಿಸಿದನು ॥ ೫ ॥

ಭಾಮಿನಿ

ತಂಗಿ ದ್ರೌಪದಿ ಕೋಮಲಾಂಗಿಯೆ । ಮಂಗಳಾತ್ಮಕಿ ಮಧುರಭಾಷಿಣಿ । ಹಿಂಗದೆನ್ನಯ ಮಾನವನು ನೀ ಕಾಯಬೇಕೆಂದು ॥ ಅಂಗಜನ ಪಿತನಿಂತು ಧ್ಯಾನಿಸೆ । ತುಂಗಕುಚಯುಗೆ ದ್ರುಪದನಂದನೆ । ಸಿಂಗರದಿ ಮಲಗಿರಲು ಪಾರ್ಥಸಮೇತ ಸಜ್ಜೆಯೊಳು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇತ್ತ ಗಜಪುರದೊಳಗೆ ದ್ರೌಪದಿ । ಯರ್ತಿಯಲಿ ಸರಿರಾತ್ರೆಯೊಳಗೆ । ಚ್ಚತ್ತರ್ು ಸಜ್ಜಾಗೃಹದೊಳಿರಲಾ । ಹೊತ್ತಿನಲ್ಲಿ ॥ ೧ ॥ ಮತ್ತೆ ಹರಿನುಡಿ ಶಬ್ದವಾಗಲು । ಭಕ್ತಿಯಲಿ ಪಾಂಚಾಲಿ ಕೇಳ್ದೆ । ಚ್ಚತ್ತರ್ು ತಾನಾಲಿಸಿದಳತ್ಯಾ । ಸಕ್ತಿಯಿಂದ ॥ ೨ ॥ ಅಣ್ಣನೆಂಬುದ ತಿಳಿದು ಮತ್ತಾ । ಬಣ್ಣಿಸುತ ಮಾನಿನಿಯು ಮನದಲಿ । ಮಿಣ್ಣನಾಲೋಚನೆಯ ಮಾಡಿದ । ಳಿನ್ನು ತಾನು ॥ ೩ ॥ ಪಾರ್ಥ ನಿದ್ರಾಸಕ್ತನಾಗಿಹ । ರಾತ್ರೆಯೊಳಗಾನೆಬ್ಬಿಸಲು ಬಲು । ಧೂರ್ತೆಯೆನ್ನದೆ ಬಿಡನು ಕೋಪೋ । ದ್ರಿಕ್ತನಾಗಿ ॥ ೪ ॥ ಅಣ್ಣನೆನ್ನನು ಕರೆವನೀಗಳು । ಮನ್ನಿಸುತ ನಾ ಪೋಗದಿರೆ ಮು । ಕ್ಕಣ್ಣಸಖ ಖತಿಗೊಳುವನೆಂದಳು । ಖಿನ್ನಳಾಗಿ ॥ ೫ ॥ ಆದುದಾಗಲೆನುತ್ತ ಪೊರಟು ವಿ । ನೋದದಲಿ ನಡೆತಂದಳರಸುತ । ಮಾಧವನ ನುತಿಸುತ್ತ ದ್ರೌಪದಿ । ಸಾದರದೊಳು ॥ ೬ ॥ ಹರಿ ಜನಾರ್ದನ ಕೃಷ್ಣ ಕೇಶವ । ಪರಮಮಂಗಳಮೂರ್ತಿ ಲಕ್ಷ್ಮೀ । ವರನೆ ಪಾಲಿಸೆನುತ್ತಲಾತನ । ಚರಣಕೆರಗೆ ॥ ೭ ॥

ರಾಗ ಸಾಂಗತ್ಯ ರೂಪಕತಾಳ

ಅಡಿಗೆರಗಿದ ಸಹಭವೆಯ ಮಸ್ತಕವನ್ನು । ಪಿಡಿದೆತ್ತಿ ಬಳಿಕ ಮಾಧವನು ॥ ಕಡು ಕರುಣದೊಳುಪಚರಿಸುತ್ತ ತೋಷದಿ । ನುಡಿಸಿದನಾ ದ್ರೌಪದಿಯನು ॥ ॥ ೧ ॥ ಬಂದೆಯಾ ತಂಗಿ ನಿನ್ನಯ ಪುರುಷರು ಸುಖ । ದಿಂದಲಿರುವರೆ ಮಂದಿರದಿ ॥ ಚಂದದಿಂದಿಲ್ಲಿಗಯ್ತಂದುದು ಲೇಸಾಯಿ । ತೆಂದು ಶ್ರೀಹರಿಯು ಪೇಳಿದನು ॥ ೨ ॥ ಮುರಮಥನನೆ ಲಾಲಿಸವರೆಲ್ಲ ಕ್ಷೇಮಿಗ । ಳರಿಕೆ ಮಾಡುವೆ ನಿನ್ನೊಳೊಂದು ॥ ಇರುಳಿನೊಳೆನ್ನನು ಸ್ಮರಿಸಿದುದೇಕೆಂದು । ಚರಣಕೆರಗ ಲುಸಿರಿದನು ॥ ೩ ॥ ತಂಗಿ ಕೇಳೆಂಟನೆ ದಿನದಿ ವೈವಾಹವ । ನಂಗಜನಿಗೆ ಮಾಳ್ಪೆನೆಂದು ॥ ಅಂಗನೆ ರುಕ್ಮಿಣಿಯೊಡನೆ ಪೇಳಲು ಮತ್ತಾ । ತುಂಗ ಸ್ತನಿಯು ಪೇಳ್ದಳೆನಗೆ ॥ ೪ ॥ ನೀನೆಂದ ತೆರದೊಳೆಂಟೇ ದಿನದೊಳಗೆನ್ನ । ಸೂನುಗೆ ಲಗ್ನವಾಗದಿರೆ ॥ ಮಾನಿನಿಯರು ಪದಿನಾರು ಸಾಸಿರವೆನ್ನಾ । ಧೀನ ದಿಂದಗಲುವುದೆನುತ ॥ ೫ ॥ ಪಂಥವ ಗೆಯ್ದೆ ನಾನರಿಯದೀ ಪರಿಯಿಂದ । ಸಂತೀಗ ದಿನವೇಳರವಧಿ ॥ ಎಂತಾದರೀ ಕಾರ್ಯವನು ನೀನೆ ಮುಂದೆ ನಿ । ಶ್ಚಿಂತೆಯೊಳೆಸಗಬೇಕೆಂದ ॥ ೬ ॥

ರಾಗ ಸುರುಟಿ ಏಕತಾಳ

ಅಣ್ಣ ಲಾಲಿಸೆಲ್ಲ । ಪೇಳ್ವುದು । ಬಣ್ಣದ ಮಾತಲ್ಲ ॥ ಬಣ್ಣಿಸುತೀ ಪರಿ ಯಿಂದಲಿ ನುಡಿದರೆ । ಹೆಣ್ಣು ನಾನು ಕೇಳೆನ್ನಿಂದಪ್ಪುದೆ ॥ ಅಣ್ಣ ॥ ೧ ॥ ನಿನ್ನೊಳಗಾಗದಿರೆ । ಮೇಣದ । ನೆನ್ನೊಳು ಪೇಳುವರೆ ॥ ಚಿನ್ಮಯಮೂರುತಿ ನೀನೆಂದುದಕಾ । ನಿರ್ಣಯ ಮಾತೊಂದೊರೆಯುವೆ ಲಾಲಿಸು ॥ ಅಣ್ಣ ॥ ೨ ॥ ಹರಿಯದಿದೆನ್ನಿಂದ । ಈ ಪರಿ । ಯೊರೆದರೆ ಗೋವಿಂದ ॥ ಹರಿ ಸರ್ವೋತ್ತಮ ನೀನೆಂದೆನುತಲಿ । ಚರಣಕೆರಗೆ ಮುರಹರ ತಾನುಸಿರಿದ ॥ ಅಣ್ಣ ॥ ೩ ॥

ರಾಗ ಸಾಂಗತ್ಯ ರೂಪಕತಾಳ

ತಂಗಿ ದ್ರೌಪದಿ ಕೇಳು ಕೊರಳ ಕೊಯ್ಯದಿರ್ ಮಾನ । ಭಂಗವಿಂತೆಸಗದಿ ರಬಲೆ ॥ ಅಂಗಜನಿಗೆ ತಕ್ಕ ವಧುವ ನೀನರಸುತ್ತ । ಹಿಂಗದೆ ಕೈಗೊಳಿಸೆನಲು ॥ ॥ ೧ ॥ ಅಣ್ಣ ಕೇಳಿಷ್ಟು ನೀ ಪೇಳ್ವುದಾದರೆ ನಾಳೆ । ಎನ್ನಿಂದಾಗುವ ಪ್ರಯತ್ನ ವನು ॥ ಮಿಣ್ಣನಯ್ತಂದು ನಾ ಮಾಳ್ಪೆ ನಿಶ್ಚಯವಿದ । ನೆಣ್ಣಿಸದಿರು ಮನ ದೊಳಗೆ ॥ ೨ ॥ ದ್ರುಪದಜೆ ನೀನಿಂತೀಕೆಃಡುವುದೀ ಪರಿ । ವಿಪರೀತ ಮಾತ ನೆನ್ನೊಡನೆ ॥ ಶಪಥ ಗೆಯ್ದುದರಿಂದ ನೆನೆದೆನು ನಾ ನಿನ್ನ । ನಪಹಾಸ್ಯಮಾಡ ದಿರಿನ್ನು ॥ ೩ ॥ ಮನ್ಮಥಜನಕ ಲಾಲಿಸಿ ಕೇಳು ನಾನೆಂಬ । ಸನ್ಮತ ನುಡಿಗಳ

ನೀಗ ॥ ನಿನ್ನ ಕಟಾಕ್ಷದೊಳೀ ಕಾರ್ಯವನು ಮಾಡ । ಲಿನ್ನೊಂದುಂಟದನು ಪೇಳುವೆನು ॥ ೪ ॥ ಪಾರ್ಥ ನಿದ್ರೆಯೊಳಿರಲಯ್ತುಂದೆನಿಲ್ಲಿಗೆ । ಚೈರ್ತರಿನ್ನೇನ ಮಾಡುವನೊ ॥ ಕೀರ್ತಿ ನಿನ್ನದು ಕರುಣಿಪುದೆನ್ನನೆನುತಲೆ। ಭಕ್ತಿಯೊಳೆರಗಿದ ಳಡಿಗೆ ॥ ೫ ॥

ಭಾಮಿನಿ

ಮುಕ್ತಿದಾತನ ನೆನೆವುತಧಿಕ ವಿ । ರಕ್ತಿಯಲಿ ದ್ರೌಪದಿಯು ಮನದಲಿ । ಯುಕ್ತಿಯಲಿ ಮನ್ಮಥನ ರತಿಯಂತಿರ್ಪ ಕನ್ನಿಕೆಯು ॥ ಶಕ್ತಿಯಿಂದಲಿ ನೋಳ್ಪೆ ನೆನುತಲೆ । ಭಕ್ತಿಯಲಿ ಭಾವಿಸುತ ಹರಿಯನು । ಭಕ್ತವತ್ಸಲ ಕಾಯೊ ನೀನೆಂದೆನುತಲೆರಗಿದಳು ॥ ೧ ॥

ರಾಗ ಮಾರವಿ ಏಕತಾಳ

ಧರಣಿಪ ಕೇಳಗ್ರಜನಡಿಗೆರಗುತ । ಭರದಲಿ ದ್ರೌಪದಿಯು ॥ ಅರಸುವೆ ತರುಣಿಯನೆನುತಾ ಕ್ಷಣ ತಾ । ಪೊರಟಳು ಧೈರ್ಯದೊಳು ॥ ೧ ॥ ತಿರುಗಿಯೆ ಪುಡುಕಲು ದಿನವೊಂದರಲೀ । ದೊರಕದು ತನಗೆಂದು ॥ ಹರಿಯ ಮನದಿ ನೆನೆದೀ ಕ್ಷಣ ನೋಡುವೆ। ಸ್ಮರಗೊಪ್ಪುವ ರತಿಯ ॥ ೨ ॥ ಧರಿಸಿಯೆ ದಿವ್ಯ ದೃಷ್ಟಿಯನಾ ಕ್ಷಣ । ಧರಣಿಪರರರಮನೆಯ ॥ ನಿರುಕಿಸಲದರೊಳು ಕಂಡಳು ಮತ್ತಾ । ಪುರವೊಂದನು ಜವದಿ ॥ ೩ ॥ ಬಂದಳು ಕೇಳ್ ಕಮಲಾ ವತಿ ಪಟ್ಟಣ। ಕಂದಿನ ರಾತ್ರೆಯೊಳು ॥ ಚಂದದಿ ಚರರನು ಕರೆದಿಂತೆಂದಳು । ಮಂದಗಮನೆ ಕಡೆಗೆ ॥ ೪ ॥

ರಾಗ ಶಂಕರಾಭರಣ ಏಕತಾಳ

ಯಾರಯ್ಯ ಬಾಗಿಲ ಕಾಯ್ವ । ಧೀರ ಚರರು ಪೇಳಿರಯ್ಯ । ನಾರಿ ಯೊರ್ವಳ್ ಹೊರಗೆ ಬಂದ । ವಾರತೆಯನು ॥ ೧ ॥ ನಾರಿಯಾದರೇನು ನಮಗೆ । ಮಾರಿಯಾದರೇನು ಕಡೆಗೆ । ಸೂರ್ಯ ಉದಯವಾಗದನಕ । ವಾರು ಪೇಳ್ವರು ॥ ೨ ॥ ಕೇಳಿರಪ್ಪ ಕಯ್ಯ ಮುಗಿವೆ । ಲಾಲಿಸುತ್ತಲೆನ್ನ ಮಾತ । ಪೇಳಿರಯ್ಯ ಧರಣಿಪತಿಗೆ। ಚಾಳಿಸದಿರಿ ॥ ೩ ॥ ಮಧ್ಯರಾತ್ರಿ ಕಾಲ ದಲ್ಲಿ । ಎದ್ದು ನೀನು ತಿರುಗಲೇಕೆ । ಬದ್ಧವೇ ನಮ್ಮರಸನೊಡನೆ। ಸುದ್ದಿ ಯಾವುದು ॥ ೪ ॥ ಚಾರಕರಿರ ನಿಮಗೇಕಿಷ್ಟು। ಪಾರುಪತ್ಯವೆನ್ನೊಳಿಂತು । ಧಾರಿಣೀಶಗರುಹಿದರೆ ವಿ । ಚಾರಿಸುವನು ॥ ೫ ॥ ಭ್ರಷ್ಟೆ ಮೂಳಿ ಸಲುಗೆ ಯೇನೆ। ಮುಟ್ಟಲಂಜುವೆವು ಕೇಳು। ಗುಟ್ಟನಿಂದ ನೀ ಪೋಗದಿರೆ। ತಟ್ಟ ನೊಯ್ವೆವು ॥ ೬ ॥ ಕಳ್ಳೆಯಲ್ಲ ಕೇಳಿರಯ್ಯ। ಪಳ್ಳ ಮಾತನಾಡಬೇಡಿ । ಖುಲ್ಲ

ತನನಿವೆನ್ನೊಳೀಗ । ಸಲ್ಲದು ನೋಡಿ ॥ ೭ ॥ ಛೀ ಛೀ ಹೆಣ್ಣು ಮೂಳಿ ನಿನಗೆ । ನಾಚಿಕಿಲ್ಲವೇನೆ ಕಡೆಗೆ । ಯೋಚನೆಯಿಲ್ಲದೆ ಪೋವು । ದಾಚೆಗೆಂದರು ॥ ೮ ॥ ಹುಚ್ಚುನಾಯಿಗಳಿರ ನಿಮ್ಮ । ಕೊಚ್ಚಿ ಬಲಿಯು ಕೊಡುವೆ ಹೀಗೆ । ತುಚ್ಛ ಗೊಳುವಿರೇಕೆನುತ್ತ । ಉಚ್ಚರಿಸಿದಳು ॥ ೯ ॥ ಮೃತ್ಯುವೋ ಮಾರಿಯೋ ಎಂದು । ಮತ್ತೆ ಚರರು ಕಮಲನೃಪನ । ಹತ್ತಿರಕಯ್ತಂದು ಬೊಬ್ಬಿ । ಡುತ್ತ ನುಡಿದರು ॥ ೧೦ ॥

ರಾಗ ಸಾರಂಗ ಅಷ್ಟತಾಳ

ಕೇಳಯ್ಯ ಧೊರೆಯೆ ನೀನು । ನಾವೆಂಬುದ । ಲಾಲಿಸಬೇಕಿದನು ॥ ಪೇಳ ಲೆಮ್ಮಳವಲ್ಲ ಲೋಕದೋಳಿದಿರಿಲ್ಲ । ಪಾಲಿಸೊ ನಮ್ಮ ಕೃಪಾಳು ನೀ ದಯ ವಿಟ್ಟು ॥ ೧ ॥ ಪುರವಲಯದೊಳೊರ್ವಳು । ತರುಣಿ ಬಂದು । ಪರಿತೋಷ ದಿಂದಿಹಳು ॥ ಪರಿಯ ನೋಡಿದರೆಮ್ಮ ರತಿಯಂತೆ ತೋರ್ಪಳು ॥ ಸುರನರೋ ರಗರಲ್ಲಿ ಸರಿಯಿಲ್ಲವವಳಿಗೆ ॥ ೨ ॥ ನೋಡಲು ನಾರಿಯಂತೆ । ತೋರ್ಪಳು ಮಾತ । ನಾಡಲು ಮೃತ್ಯುವಂತೆ ॥ ರೂಢಿಯೊಳವಳಂಥ ಪಾಡಿನ ಪೆಣ್ಗಳ । ವಾಡಿಕೆಯಿಂದಲಿ ನೋಡಲಿಲ್ಲೆಂದರು ॥ ೩ ॥ ಎಂದ ಮಾತನು ಕೇಳಿದ । ಕಮಲಭೂಪ । ನಂದು ತೋಷವ ತಾಳಿದ ॥ ಮಂದಗಮನೆಯನ್ನು ಕರೆಯಿ ರೆಂದೆನುತಲಿ । ಚಂದದಿಂದೋಲಗವಿತ್ತು ಕುಳಿತನಾಗ ॥ ೪ ॥

ಭಾಮಿನಿ

ಧರಣಿಪತಿ ಕೇಳಿಂತು ವಿಭವದೊ । ಳಿರೆ ಕಮಲಭೂಪಾಲನಾಗಲೆ । ಭರದಿ ಚರರಿಗೆ ನೇಮವಿತ್ತಬಲೆಯನು ಕರೆಸಿದನು ॥ ಪರಮ ಸಂತೋಷದಲಿ ಮತ್ತಾ । ತರುಣಿಗಾಸನವಿತ್ತು ರಾತ್ರಿಯೊ । ಳಿರದೆ ಬಂದುದ ಪೇಳೆನುತ ಬೆಸಗೊಂಡನಾಕೆಯನು ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ತರುಣಿ ನೀನೆಲ್ಲಿಂದ ಬಂದುದೀ ರಾತ್ರಿಯೊ । ಳುರುತರ ತೋಷದಲಿ ॥ ವರನಾರು ದೇಶವಾವುದು ಪೇಳೆಂದೆನುತಲೆ । ಧರಣಿಪ ಬೆಸಗೊಂಡನು ॥ ೧ ॥ ಎಂದ ಮಾತನು ಕೇಳಿ ದ್ರುಪದನಂದನೆಯೆದ್ದು । ನಿಂದು ಮುದದಿ ನಗುತ ॥ ಬಂದ ಕಾರ್ಯವನೀವುದಾದರೆ ನಿನಗದ । ರಂದ ಪೇಳುವೆನೆಂದಳು ॥ ೨ ॥ ತರುಣಿ ಸಂಶಯ ಬೇಡ ತಿಳುಹು ನೀ ಬಂದಿಹ । ಪರಿಯನೀಗೆನ್ನೊಡನೆ ॥ ಹರುಷದಿ ಪೇಳ್ದರೆ ಕರುಣಿಸಿ ಕೊಡುವೆನು । ಭರದಿಂದಲೀಗ ನಾನು ॥ ೩ ॥ ಕೊಡುವುದಾದರೆ ಎನ್ನ ಕರದಿ ಭಾಷೆಯ ನೀಡು । ದೃಢವಾಗಿ ಪೇಳ್ವೆನಿಂದು ॥

ಸಡಗರದಿಂದಲಿ ದ್ರೌಪದಿಯುಸಿರಲು । ನುಡಿದ ಕಮಲಭೂಪನು ॥ ೪ ॥ ಕ್ಷತ್ರಿಯ ನೃಪರಾಡಿದ ಮಾತು ಪುಸಿಯಲ್ಲ। ಚಿತ್ತಶುದ್ಧದೊಳು ನೀನು ॥ ಸತ್ಯದಿ ಬೇಡಿದರಿತ್ತಪೆನೆನಲಾಗ । ಪೃಥ್ವಿಪಾಲಕಗೆಂದಳು ॥ ೫ ॥ ಸೃಷ್ಟೀಶ ಕೇಳಿದು ದಿಟವಿದಾದರೆ ನೀ ಕೈ । ತಟ್ಟಿ ಪೇಳಿದರೆ ನಾನು ॥ ತಟ್ಟನೆ ಪೇಳುವೆ ನೆಂದೆನುತುಸಿರಲು । ಕೊಟ್ಟನು ಭಾಷೆಯನು ॥ ೬ ॥ ಇಷ್ಟಾದ ಮೇಲೆ ನಾ ಪೇಳುವೆ ನೀ ಕಿವಿ । ಗೊಟ್ಟು ಲಾಲಿಪುದಿದನು ॥ ಸೃಷ್ಟಿಗಧಿಕವಾದ ವರ ಹಸ್ತಿ ನಾವತಿ । ಪಟ್ಟಣದರಸುಗಳು ॥ ೭ ॥ ಪಂಚಪಾಂಡವರಿರುತಿಹರವರಂಗನೆ । ಪಾಂಚಾಲೆ ದ್ರೌಪದಿಯು ॥ ಪಾಂಚಾಲರಾಜನ ಕುವರಿಯೆಂದೆನ್ನ ಪ್ರ। ಪಂಚದಿ ಕರೆಯುವರು ॥ ೮ ॥ ದ್ವಾರಕೆಯೊಳು ಸಚ್ಚಿದಾನಂದನಾಗಿಹ । ಧೀರ ನೆನ್ನಗ್ರಜನು ॥ ವಾರಿಜಾಂಬಕನಿಗೆ ತರಳನಾಗಿರುತಿಹ । ಮಾರನೆಂಬವನು ತಾನು ॥ ೯ ॥ ಮಂದರಧರನ ಕುಮಾರಗೆ ನಿನ್ನಯ । ನಂದನೆ ರತಿಯನೀಗ ॥ ಚಂದದಿ ಲಗ್ನವ ಮಾಡಲೋಸುಗ ನಡೆ । ತಂದಿಹೆ ತಾನೆಂದಳು ॥ ೧೦ ॥ ವಿಸ್ತಾರದಲಿ ನಾಳೆ ರಚಿಸು ವೈವಾಹವ । ಸ್ವಸ್ಥಾನವಹುದೆಲ್ಲರ್ಗೆ ॥ ಮತ್ತೆ ನಿಮ್ಮೆಲ್ಲರ ಪೊರೆವ ಶ್ರೀಹರಿಯೆಂದು । ಬಿತ್ತರಿಸಿದಳವಗೆ ॥ ೧೧ ॥

ಭಾಮಿನಿ

ಕರಿಪುರಾಧಿಪ ಕೇಳು ದ್ರುಪದಜೆ । ಯೊರೆಯೆ ಲಾಲಿಸುತಾ ಕಮಲನೃಪ । ನುರುತರದ ರೋಷದಲಿ ಕಂಗಳೊಳಾಗ ಕಿಡಿಗೆದರಿ ॥ ಭರದಿ ಹುಂಕರಿಸುತ್ತ ಲಾಕ್ಷಣ । ತರುಣಿ ಪಾಂಚಾಲೆಯನು ನೋಡುತ । ಲಿರವೆ ಪಲ್ಮೊರೆದೆಂದ ನೊಂದುತ್ತರವನವಳೊಡನೆ ॥ ೧ ॥

ರಾಗ ಮಾರವಿ ಏಕತಾಳ

ಕೆಟ್ಟ ಗೋವಳನ ಕುಮಾರಗೆ ಕೊಡುವೆನೆ । ಹುಟ್ಟಿದ ಕುವರಿಯನು ॥ ಎಷ್ಟೆಂದರು ಮನಮುಟ್ಟದು ಸುಮ್ಮನೆ । ಸಿಟ್ಟಾಗದಿರಿನ್ನು ॥ ೧ ॥ ಮಾತನು ಕೊಟ್ಟಿಹೆ ಮೊದಲೆನಗೀ ಪರಿ । ನೀತಿಯ ತಪ್ಪಿದರೆ ॥ ಏತರ ನೃಪ ನೀನೆನುತಲಿ ಜರೆವರು । ಭೂತಳದವರೆಲ್ಲ ॥ ೨ ॥ ದ್ರುಪದಾತ್ಮಜೆ ನೀ ಲಾಲಿಸಿ ಕೇಳೀ। ವಿಪರೀತದ ನುಡಿಗೆ ॥ ಗುಪಿತದಿ ಕೊಡೆನೆನ್ನಣುಗೆಯ ನುಡಿಯದಿ । ರಪ ಹಾಸ್ಯದ ಮಾತ ॥ ೩ ॥ ಧರಣಿಪ ಈ ಪರಿಯೊಳಗೇಕಾಡುವೆ । ಕೊರತೆಯಲ್ಲವೆ ನೀನು ॥ ಒರೆದಿಹ ಭಾಷೆಯು ತಪ್ಪುವುದುಂಟೇ । ಸರಿಯಲ್ಲಿದು ನಿನಗೆ ॥ ೪ ॥ ಗೊಲ್ಲರ ಮನೆಗಳ ಪೊಗುತಲಿ ಪಾಲ್ ಮೊಸ । ರೆಲ್ಲವ ಸವಿದುಂಡ ॥ ಕಳ್ಳನ ಸುತನಿಗೆ ಕೊಡೆ ನಾ ಪುತ್ರಿಯ । ಸುಳ್ಳಲ್ಲಿದು ನಿಜವು ॥ ೫ ॥ ಕ್ಷತ್ರಿಕುಲಜ

ನೀನಾಡಿದ ಭಾಷೆಯು । ವ್ಯರ್ಥದಿ ಕಳೆಯದಿರು ॥ ಸ್ವಾರ್ಥದಿ ಪರಗತಿ ಕೆಡು
ವುದು ನಿನಗಪ । ಕೀರ್ತಿಯು ಬಂದಪುದು ॥ ೬ ॥ ಚಾರಕರೆತ್ತಲು ಪೋದರೊ
ಮತ್ತೀ । ನಾರಿಯು ಕರ ಪಿಡಿದು ॥ ಘೋರನೆ ನೂಕಿರೆನುತ್ತಿರೆ ಪೇಳ್ದಳು ।
ಭೂರಮಣನೊಳವಳು ॥ ೭ ॥

ರಾಗ ಶಂಕರಾಭರಣ ಏಕತಾಳ

ಇಷ್ಟು ಕೋಪವೇತಕಯ್ಯ । ಸೃಷ್ಟಿಪಾಲ ಕೇಳು ನಿನ್ನ । ದಿಟ್ಟತನವು
ಸಲ್ಲದೆಂದು । ತಟ್ಟನುಸಿರುವೆ ॥ ೧ ॥ ತೃಣವ ಮುರಿದು ಸಾರುವೆ ನಿ ।
ನ್ನಣುಗೆ ರತಿಯು ಸ್ಮರನಿಗೀಯು । ದಣಕವಾಡಿದರೆ ಕೆಡುವೆ । ಕ್ಷಣದೊ
ಳೆಂದಳು ॥ ೨ ॥ ಇಷ್ಟಾದ ಮೇಲಿನ್ನು ಹರಿಯು । ಸಿಟ್ಟಿನಿಂದಿಲ್ಲಿಗಯ್ತಂದು ।
ಕುಟ್ಟಿ ನಿನ್ನ ಬಳಿಕ ಸುತೆಯು । ತಟ್ಟನೊಯ್ವನು ॥ ೩ ॥ ಕೊಟ್ಟ ಭಾಷೆ
ನಡೆಸದಿಂತು । ಸೃಷ್ಟಿಗೊಡೆಯನಿರಲು ಕಂಡು । ಬಟ್ಟೆದೋರದಾಗ ಪೊರ ।
ಮಟ್ಟಳು ಕೃಷ್ಣೆ ॥ ೪ ॥

ವಾರ್ಧಿಕ

ಅರಸ ಕೇಳಿಂತು ದ್ರುಪದಜೆ ಪೊರಟು ಮಾರ್ಗದಲಿ । ಹರಿಯೆ ನೀನೇ
ಬಲ್ಲೆ ಕಾರ್ಯವ ನಿನ್ನದೆನುತ್ತ । ಭರದಿ ಕಂಗಳ ಮುಚ್ಚಿ ನಿಂದಿರ್ದಳಿತ್ತಲವ
ಧರಿಸು ಪೂರ್ವದ ಕಥೆಯನು ॥ ತರುಣಿ ರತಿದೇವಿ ತಾ ಹಿಂದೆ ಶಂಬರನಿಂಗೆ ।
ಪರಿಪರಿಯ ಭೋಜ್ಯಗಳನಣೆಮಾಡುತಿರಲಿತ್ತ । ಸ್ಮರನು ರುಕ್ಮಿಣಿಯುದರ
ದೊಳಗುದಿಸುತಸುರನಂ ಕೊಂದು ರತಿಯೊಡನಿರುತಿರೆ ॥ ೧ ॥ ಅರಿತು ನಾರದ
ಮುನಿಪ ಬರಲು ದಂಪತಿಗಳತಿ । ಹರುಷದಿಂದುಪಚರಿಸಲಾಗ ಋಷಿವರ
ನೆಂದ । ಹಿರಿಯಳಾಗಿಹ ರತಿಯನಗ್ನಿಯೊಳಗಿರಿಸೆಂದು ಪೇಳ್ದ ನುಡಿ ಕೇಳು
ತಾಗ ॥ ವರಪತಿವ್ರತೆಯನಗ್ನಿಯೊಳಿಡಲು ಬಳಿಕ ತಾ । ಧರೆಯೊಳನ್ಯಾಧಿಕ
ವಾಗಿರುವ ಕಮಲಾವತಿಯು । ಪುರದರಸ ಕಮಲಭೂಪನ ಕುವರಿಯಾಗಿ
ಜನಿಸಿರ್ದಳತಿ ವೈಭವದೊಳು ॥ ೨ ॥

ರಾಗ ಭೈರವಿ ಝಂಪೆತಾಳ

ಧರೆಯಧಿಪ ಕೇಳಿಂತು । ವರ ಕಮಲಭೂಪನಿಗೆ । ತರುಣಿಮಣಿ ರತಿ
ಯುದಿಸಿ । ಮೆರೆದಿರಲ್ಕಂದು ॥ ೧ ॥ ಕುಂತಿಸುತರರಸಿಯೊಡ । ನಿಂತು ಪಿತ
ನಾಡಿದುದ । ನಂತರಂಗದಿ ತಿಳಿದು । ಚಿಂತಿಸಿದಳವಳು ॥ ೨ ॥ ಬಂದು ತಾತನಿ
ಗೆರಗಿ । ನಿಂದು ಕರಗಳ ಮುಗಿದು । ಚಂದದಿಂದುಸಿರಿದಳು । ಬಂದ ಕಾರ್ಯ
ವನು ॥ ೩ ॥

ರಾಗ ಸೌರಾಷ್ಟ್ರ ಅಷ್ಟತಾಳ

ಏನಿದು ಹೊಸ ಪರಿ ಸರಿರಾತ್ರಿಯೊಳು ಸಭೆ । ತಂದೆ ಕೇಳು ॥ ಈಗ ॥ ನೀನೆನ್ನ ಮೇಲತಿ ದಯವಿಟ್ಟು ವಿನಯದಿ । ತಾತ ಪೇಳು ॥ ೧ ॥ ಬಾಲೆ ದ್ರೌಪದಿಯ ನುಡಿಯ ಕೇಳ್ದೆ ನಾನೀಗ । ತಂದೆ ಕೇಳು ॥ ಬಹು ॥ ಲೀಲೆ ಯಿಂದಿವಳೇನನುಸಿರಿದಳೆಂಬುದ । ತಾತ ಪೇಳು ॥ ೨ ॥ ಪಂಥಪೌರುಷವಾಡಿ ದಂತರಂಗವಿದೇನು । ತಂದೆ ಕೇಳು ॥ ನಿ ॥ ಶ್ಚಿಂತೆಯೊಳ್ ಮಗಳೆಂಬ ಮಮತೆ ಯೊಳೆನಗೀಗ । ತಾತ ಪೇಳು ॥ ೩ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ತರಳೆಯೇಕೀ ಪರಿಯನುಸಿರುವೆ । ಧರಣಿಪಾಲಕನಾಗಿ ಸಭೆಗ । ಯ್ದಿರಲು ಬೇರಿನ್ನಾರು ಬರುವರು । ಮರುಳು ಮಾತೇ ॥ ೧ ॥ ಈಗಲೀ ನಡುನಿಶಿಯೊ ಳೊಂದು । ದ್ಯೋಗ ಮಂತ್ರಿಗಳೊಡನೆ ಯೋಚಿಸ । ಲಾಗಿ ತಾನೋಲಗವ ನಿತ್ತೆ ಸ । ರಾಗದಿಂದ ॥ ೨ ॥ ಬರಿದೆ ನಿನಗೇಕಾ ವಿಚಾರವು । ತೆರಳು ಸಜ್ಜಾ ಗೃಹಕೆನಲು ಪದ । ಕೆರಗಿ ಬಿನ್ನಹ ಮಾಡಿದಳು ತ । ನ್ನಿರವನಾಗ ॥ ೩ ॥

ರಾಗ ಬಿಲಹರಿ ಏಕತಾಳ

ತಂದೆ ಲಾಲಿಸಿ ಕೇಳು ಸಂದೇಹಗೊಳದಿರು । ಪಿಂದಣಾಗಮವ ನಾನಿಂ ದೆಂಬೆ ನಿನಗೆ ॥ ಬಂದುದನರಿತೆನು ದ್ರುಪದನಂದನೆ ತಾನು । ಚೆಂದದಿ ಪೇಳುವೆ ನದನು ಲಾಲಿಪುದು ॥ ೧ ॥ ದ್ವಾರಕೆಯೊಳು ಸಚ್ಚಿದಾನಂದನಿರುತಿಹ । ಧೀರ ನಾತನ ಪುತ್ರ ಮಾರನೆಂಬವಗೆ ॥ ಧಾರೆಯನೆರೆಸೆನ್ನ ಮದುವೆಯನೆಸಗಲು । ನಾರಿ ದ್ರೌಪದಿ ಬಂದಳೀ ರೀತಿಗಾಗಿ ॥ ೨ ॥ ಸಾರಸನಾಭ ಹಲಾಯುಧ ರೆಂದೆಂಬ । ವೀರರೀರ್ವರು ಕೇಳು ಮಾವಂದಿರೆನಗೆ ॥ ನಾರಿಯರ್ ಪದಿನಾರು ಸಾವಿರದೆಂಟು ವಿ । ಚಾರಿಸಲದರೊಳು ರೇವತಿಸಹಿತ ॥ ೩ ॥ ರಾಣಿಯರೆನ ಗತ್ತೆಗಳು ಬಳಿಕಾ ಪಂಚ । ಬಾಣನು ಪತಿಯೆಂಬುದರಿಯೆಯ ತಾತ ॥ ಪ್ರಾಣವಲ್ಲಭನನ್ನು ಕಾಣದೆನ್ನಯ ಮನ । ಕಾನಂದವಾಗದಿನ್ನೇನೆಂದುಸಿ ರಲಿ ॥ ೪ ॥ ಕರೆಸು ದ್ರೌಪದಿಯಳನಿರಿಸು ಲಗ್ನವ ಬೇಗ । ಬರಿದೆ ಕೋಪಿಸದಿ ರೀಗೊರೆಯುವೆ ನಿನಗೆ ॥ ಸ್ಮರಜನಕನ ಮೇಲೆ ಪರಿಭೇದವೀ ಪರಿ । ತರವಲ್ಲ ಶೀಘ್ರದಿ ಪರಿಣಯವೆಸಗು ॥ ೫ ॥ ಹಿಂದೆ ಶಂಬರನೊಳು ಸೆರೆಯ ಸಿಕ್ಕಿದರೆನ್ನ । ನಂದು ಬಿಡಿಸಿದನು ಕೊಂದು ರಕ್ಕಸನ ॥ ಬಂದು ನಾರದ ಕಾಮಗೆಂದನು ನೀನವ । ಳಿಂದ ಕಿರಿಯ ಕೀರ್ತಿ ಕುಂದುವುದೆನುತ ॥ ೬ ॥

ಎಂದ ನುಡಿಯು ಕೇಳಿ ಬಂದಿಲ್ಲಿ ಜನಿಸಿದೆ। ಸಿಂದೇತಕೀ ಪರಿ ಸಂದೇಹ ನಿನಗೆ॥ ಚೆಂದದಿ ಮದುವೆಯುನಿಂದು ನೀನೆಸಗಲು । ಮುಂದೆ ರಕ್ಷಿಸುವ ಮುಕುಂದ ತಾನೊಲಿದು ॥ ೭ ॥ ಪರಮ ಪತಿವ್ರತೆ ಚಂಡಿಸ್ವರೂಪದ। ಮುರವೈರಿಯನು ಜೆಯು ತರುಣಿ ದ್ರೌಪದಿಯು ॥ ಅರಿಯದೆ ನೀನವಳಿರವನು ಗರ್ವದಿ। ಜಿರು ನುಡಿಯಾಡಿಹೆ ಕರೆಸು ಬೇಗೆನಲು ॥ ೮ ॥

ಭಾಮಿನಿ

ಎಂದ ಸುತೆಯುಳ ನುಡಿಗೆ ಭೂಪತಿ । ನೊಂದು ಮನದಲಿ ದ್ರುಪದಜೆಯು ಬಳಿ । ಗಿಂದು ತಾ ಪೋಗುವೆನೆನುತ ನಿಶ್ಚಯಿಸಿ ತ್ವರಿತದೊಳು ॥ ಬಂದು ನುತಿಸುತಲೆರಗಿ ಪಾದಕೆ। ಮಂದಬುದ್ಧಿಯು ಬಿಟ್ಟೆನೀಗಳು। ನಂದನೆಯು ತಾ ಕೊಡುವೆ ಪಾಲಿಸು ಕೋಪಿಸದಿರೆಂದ ॥ ೧ ॥

ರಾಗ ಸುರುಟಿ ಏಕತಾಳ

ಲಾಲಿಸು ದ್ರುಪದಸುತೆ। ಕರುಣದಿ। ಪಾಲಿಸು ವಿಖ್ಯಾತೆ ॥ ನೀಲಾಂಗನ ವರ । ಬಾಲಗೆ ಕುವರಿಯು । ಲೀಲೆಯೊಳೀವೆನು । ಕೇಳೀ ಮಾತನು ॥ ಲಾಲಿಸು ॥ ೧ ॥ ನಾಳೆಯೆ ಲಗ್ನವನು । ರಚಿಸಲಿ । ಕಾಲಸ್ಯವಿದೇನು ॥ ಶ್ರೀಲೋಲನಿಗೆ। ನ್ನಾಲೋಚನೆಯನು । ಪೇಳೀ ಹರುಷೋ । ನ್ಮೂಲದ ವಾರ್ತೆಯ ॥ ಲಾಲಿಸು ॥ ೨ ॥ ನಿನ್ನಯ ಮಹಿಮೆಯನು । ತಿಳಿಯದೆ । ಮುನ್ನವಮಾನವನು ॥ ಎನ್ನಿಂದಾಯ್ತದ। ನುನ್ನತ ಕೃಪೆಯೊಳು । ಸನ್ಮತ ದಿಂದಲಿ। ಮನ್ನಿಸು ಕಾರ್ಯವ ॥ ಲಾಲಿಸು ॥ ೩ ॥ ಮನ್ಮಥಪಿತ ದಯದಿ। ಸ್ನೇಹವ । ನೆನ್ನೊಳಿಡುವ ತೆರದಿ ॥ ಚೆನ್ನಾಗುಸಿರುತ । ಭಿನ್ನಭೇದಗಳ। ನೆನ್ನೊಳಿಡದೆ ಕರೆ। ನಿನ್ನವರ್ಗೆಂದನು ॥ ಲಾಲಿಸು ॥ ೪ ॥

ಭಾಮಿನಿ

ತಾಯೆ ದ್ರೌಪದಿ ನಿನ್ನ ನಂಬಿದೆ । ಮಾಯಕದ ಮಾತಲ್ಲ ನಿಜವಿದು। ಕಾಯಬೇಕಿಂದೆನ್ನ ಮರೆದು ಶತಾಪರಾಧವನು ॥ ಆಯತದಿ ದಯೆಯಿಟ್ಟು ಪಾಂಡವ। ಜಾಯೆ ನೀನೀ ಕಾರ್ಯವೆಸಗಲು । ತೋಯಜಾಂಬಕಗುಸಿರ ನಿರ್ವಿಘ್ನತೆಯ ಕರುಣಿಪುದು ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇಂತು ನುತಿಸುವ ನೃಪನ ಕಾಣುತ। ಸಂತಸದಿ ದ್ರೌಪದಿಯು ಮನ್ನಿಸಿ। ಚಿಂತೆಯನು ತೊರೆದುಸಿರಿದಳು ಭೂ। ಕಾಂತನೊಡನೆ ॥ ೧ ॥ ಏಳರಸ ಬಿಡು ವ್ಯಾಕುಲತೆಯ ವಿ । ಶಾಲ ವೈಭವದಿಂದ ತವಕದಿ । ನಾಳೆ ಕರೆಸುವೆ

ಹರಿಯುನಾ ಯದು । ಜಾಲಸಹಿತ ॥ ೨ ॥ ಬರುವರೈ ದಿಬ್ಬಣದೊಡನೆ ಪಂ । ಕರುಹಸಂಭವ ರುದ್ರ ತ್ರಿದಶರು । ಪುರವ ಸಿಂಗರಗೆಯ್ದು ಕರೆಸೈ । ಧರಣಿಪ ರನು ॥ ೩ ॥ ಲೀಲೆಯಿಂದಂಗಜಗೆ ನಿನ್ನಯ । ಬಾಲಿಕೆಯ ವೈವಾಹ ಮಾಡಿಸು । ಪಾಲಿಸುವ ಸತ್ಕರುಣದಿಂದಲಿ । ಶ್ರೀಲಲಾಮ ॥ ೪ ॥ ಬಂದು ನೀ ದಿಬ್ಬಣಿಗರೊಡನಾ । ನಂದದಲಿ ನಡೆಸುವುದು ಕಾರ್ಯವ । ನೆಂದೆನುತ ನುಡಿಯಲ್ಕೆ ಪೇಳಿದ । ಳಿಂದುಪದನೆ ॥ ೫ ॥ ಉಳಿದೆನಾದರೆ ಬರುವೆನಿಲ್ಲಿಗೆ । ನಳಿನನಾಭನು ಸಹಿತಲೆಂದೆನೆ । ಕಳವಳಿಸಿ ಪಾಂಚಾಲೆಗುಸಿರಿದ । ನಿಳೆಯ ಪಾಲ ॥ ೬ ॥ ನಾಳೆ ಮದುವೆಗೆ ನೀನು ಬಾರದೆ । ಶ್ರೀಲತಾಂಗಿಯ ರಮಣ ನಪ್ಪುರೆ । ಬಾಲಿಕೆಯ ನಾ ಕೊಡೆನು ಮಾತಿದು । ಜಾಲವಲ್ಲ ॥ ೭ ॥ ಬರುವೆ ನಿಶ್ಚಯವಾಗಿ ನಂಬಿಕೊ । ತೆರಳುವೆನು ತಾನೆನುತ ದ್ರೌಪದಿ । ಪೊರಟು ತಾನಯ್ತಂದಳಾ ಕ್ಷಣ । ಹರುಷದಿಂದ ॥ ೮ ॥ ಬಂದು ಕೃಷ್ಣನ ಪದಕೆಂಗಿ ತಾ । ನಿಂದು ಲಕ್ಷ್ಮೀರಮಣ ಜಯ ಜಯ । ವೆಂದು ನುತಿಸುತ್ತಿರ್ದಳತ್ಯಾ । ನಂದದಿಂದ ॥ ೯ ॥

ರಾಗ ಸಾಂಗತ್ಯ ರೂಪಕತಾಳ

ಎರಗಿದ ದ್ರುಪದಜೆಯನು ಪಿಡಿದೆತ್ತುತ । ಕರುಣಾಳು ನುಡಿದ ತಾನವಳ್ಗೆ ॥ ತರಳ ಮನ್ಮಥನಿಂಗೆ ವೈವಾಹವೆಸಗಲು । ಹರಿಣಾಕ್ಷಿ ದೊರೆತಳೇನವ್ವ ॥ ೧ ॥ ನಿನ್ನ ಕಟಾಕ್ಷದಿ ಪೋಗಿ ನಾನೀಗಳು । ಮುನ್ನ ದೇಶವನೆಲ್ಲ ತಿರುಗಿ ॥ ಚಿನ್ಮಯಾತ್ಮಕನೆ ಕೇಳ್ ಕಮಲಾವತೀಪುರ । ವನ್ನು ಸಾರಿದೆ ಹರುಷದಲಿ ॥ ॥ ೨ ॥ ಕಮಲಭೂಪಾಲನಾತ್ಮಜೆ ರತಿಯೆಂಬಳು । ವಿಮಲ ಕನ್ನಿಕೆಯೊರ್ವ ಳಿಹಳು ॥ ಅಸುರವಂದಿತ ನಿನ್ನ ಸುತಗೀಯಬೇಕೆಂದು । ಮಮತೆಯೊಳ್ ನಿಶ್ಚಯಗೆಯ್ದೆ ॥ ೩ ॥ ನಾಳೆ ಲಗ್ನವನಿಟ್ಟು ನಾನಿಲ್ಲಿಗಯ್ತಂದೆ । ಜಾಲಮಾತಲ್ಲ ಕೇಳಿದನು ॥ ನೀಲನಿಭಾಂಗ ದಿಬ್ಬಣ ಸಹ ತೆರಳುವು । ದಾಲಸ್ಯವೇಕಿನ್ನು ಬರಿದೆ ॥ ೪ ॥ ಇಂತೆಂದು ಚರಣಕೊಂದಿಸುತಾಗ ದ್ರುಪದಜೆ । ದಂತಿಪುರಕೆ ನಡೆತರಲು ॥ ಅಂತರಂಗದಿ ಪಾರ್ಥನೇಳ್ವುದರೊಳಗೆ ನಿ । ಶ್ಚಿಂತೆಯೊಳಯ್ದುವೆನೆನುತ ॥ ೫ ॥ ದಂತಿಗಾಮಿನಿ ಹಲವೆಣಿಸುತ್ತ ಮನದೊಳು । ಚಿಂತಿಸುತಯ್ತರಲಾಗಿ ॥ ಸಂತಸದೊಳು ಪಾಂಡುಸುತರೊಳಗಾದ ವೃ । ತ್ತಾಂತವ ಕೇಳು ಪೇಳುವೆನು ॥ ೬ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇತ್ತ ಗಜಪುರದೊಳಗೆ ಪಾರ್ಥನು । ಮತ್ತೆ ತಾನೆಚ್ಚತ್ತ ಸಮಯದೊ ।

ಕೊತ್ತಿನಲಿ ಸತಿ ಕಾಣದಿರಲರ । ಸುತ್ತ ಬಳಿಕ ॥ ೧ ॥ ತರುಣಿ ದ್ರೌಪದಿಯೆತ್ತ ಪೋಗಿಹ । ಕಿರುಳಿನಲಿ ತಾ ನೋಳ್ಪೆನೆನುತಲಿ । ಕರದಿ ಖಡ್ಗವ ಪಿಡಿದು ಪೊರಟನು । ಭರದೊಳಂದು ॥ ೨ ॥ ಊರುಕೇರಿಯು ಮನೆಮನೆಗಳನು । ಸಾರುತರಸುತ ಕಾಣದೀ ಪರಿ । ನಾರಿ ದ್ರೌಪದಿಯೆನುತ ಕರೆವುತ । ಆರು ಭಟಿಸಿ ॥ ೩ ॥ ಇಂತು ರೋಷದೊಳಾ ಧನಂಜಯು । ನಿಂತು ಪೊರಬಾಗಿಲಲಿ ನೋಡುತ । ನಿಂತಿರಲು ಬಂದಡಿಗೆ ಮಣಿದಳು । ದಂತಿಗಮನೆ ॥ ೪ ॥

ರಾಗ ಮಾರವಿ ಏಕತಾಳ

ಚರಣದೊಳೆರಗಿದ ತರುಣಿಯು ಮುಡಿಯನು । ಕರದಲಿ ಪಿಡಿದಾಗ ॥ ಶಿರವನು ಛೇದಿಸಿ ಪಂಥವ ಮೆರೆಸುವೆ । ಪುರಜನರೀಕ್ಷಿಸಲಿ ॥ ೧ ॥ ಎಂದೆನುತೀ ಪರಿಯಿಂದಲಿ ಪಾರ್ಥನು । ತಂದಡಗೆಡವುತಿರೆ ॥ ಮಂದಗಮನೆ ಕೂಗಲು ಧ್ವನಿ ಕೇಳಿದು । ದಂದನಿಲಜಗೊಡನೆ ॥ ೨ ॥ ಆ ಯುವತಿಯು ಧ್ವನಿ ಕೇಳುತ ಬಂದನು । ವಾಯುಕುಮಾರಕನು ॥ ಕಾಯದಿ ಕಳವಳಗೊಳುತಲುಸಿರಿದನು । ಪಾಯದೊಳಂದವಗೆ ॥ ೩ ॥ ಪಾತಕಿ ಕೇಳ್ ನಮ್ಮೈವರ ಸತಿಯು ನೀ । ಘಾತಿಸಬಹುದೇನೈ ॥ ನೀತಿಯನುಳಿದೀ ರೀತಿಯನೆಸಗಲು । ಖ್ಯಾತಿಯು ನಿನಗಹುದೆ ॥ ೪ ॥ ಸತ್ಯವನೀಕ್ಷಿಸಲಗ್ನಿಯ ಕುಂಡವ । ವಿಸ್ತರಿಸುವುದೀಗ ॥ ಚಿತ್ತದಿ ಸಂಶಯವೇಕೆನುತುಸಿರಲು । ಪಾರ್ಥನು ಕೇಳುತಲೆ ॥ ೫ ॥

ರಾಗ ಶಂಕರಾಭರಣ ಮಟ್ಟೆತಾಳ

ವೀರ ಪಾರ್ಥ ಬಳಿಕಲು । ಬ್ಬೇರಿ ಪಾವಕಾಸ್ತ್ರವನ್ನು । ಭಾರಿ ಧನುವಿಗೇರಿಸೆಚ್ಚ । ನಾರುಭಟಿಸುತ ॥ ಘೋರನೆದ್ದುದಗ್ನಿ ಹೊಗೆಯು । ಸೇರುತಂಬರವನು ಮುಸುಕಿ । ತೋರಿತದರೊಳಾಗಲುರಿಯು । ಭೂರಿ ಪ್ರಭೆಯಲಿ ॥ ॥೧॥ ಸುರಪಸುತನು ನುಡಿದ ಮನದಿ । ಹರುಷಗೊಳುತ ದ್ರುಪದಸುತೆಯು । ಪರಿಕಿಸುವೆನೆನುತ್ತಲಾಗ । ಕರೆದು ಪೇಳ್ದನು ॥ ತರುಣಿ ಕೇಳೆ ನೀನು ಮುಡಿದ । ಶಿರದ ಪುಷ್ಪ ಬಾಡೆ ನಿನ್ನ । ಗುರಿಯು ಗೈವೆ ಖಡುಗಕೀಗ । ಪರಿಯು ನೋಡೆಲೆ ॥ ॥ ೨ ॥ ಎಂದು ಪೇಳ್ದ ಮಾತ ಕೇಳ್ದು । ಮಂದಗಮನೆ ಹರಿಯ ನೆನೆದು । ತಂದೆ ನೀನೆ ರಕ್ಷಿಸೆನುತ । ನಿಂದು ಸ್ತುತಿಸುತ ॥ ಒಂದೆ ಮನಸಿನಿಂದಲಾಗ । ಬಂದಳು ಪ್ರದಕ್ಷಿಣವನು । ಸುಂದರಾಂಗಿ ಪೊಕ್ಕಳಗ್ನಿ । ಗಂದು ತವಕದಿ ॥ ೩ ॥

ಭಾಮಿನಿ

ಹರಿಯೆ ನಿನ್ನಾಜ್ಞೆಯಲಿ ತಾನ । ಬ್ಬಿರಲು ಕೋಪಿಸಿ ಪಾರ್ಥನೆನ್ನನು । ಪರಿಕಿಸುವ ನೀ ಕಾಯಬೇಕೆಂದೆನುತ ನುತಿಸುತಿರೆ ॥ ಪರಮ ಮಂಗಲವಾಗ

ಲಾಕೆಯು । ಹರುಷದಲಿ ನಡೆತಂದು ಪತಿಗಳ । ಚರಣಕೆರಗಲು ನುಡಿದ ಸಹಭವನೊಡನೆ ಮರುತಜನು ॥ ೧ ॥

ರಾಗ ರೇಗುಪ್ತಿ ಏಕತಾಳ

ನೋಡಿದೆಯಾ । ತಮ್ಮ । ನೋಡಿದೆಯಾ ॥ ಪ ॥ ಪುಣ್ಯಕುಲದಿ ಪುಟ್ಟಿ । ನಿನ್ನೊಳು ಗ್ರಹಿಸದೆ । ವಿಣ್ಣನೆ ಸ್ತ್ರೀಹತ್ಯ । ವನ್ನು ಮಾಡುವರೆ ॥ ಪುಣ್ಯಾತ್ಮೆ ದ್ರೌಪದಿ । ಪರಮ ಪತಿವ್ರತೆ । ನಿರ್ಣಯವರಿಯದೆ । ಕಣ್ಣಾರೆ ಕೊಲುತಿಹೆ ॥ ನೋಡಿದೆಯಾ ॥ ೧ ॥ ದಿನಚರಿಯಲಿ ಪುತ್ರೀ । ವನಜಾಕ್ಷಿ ತಿರುಗುವ । ಳನು ಮಾನವಿಲ್ಲದೆ । ನಿನಗುಸಿರುವೆನು ॥ ಸನುಮತದಲಿ ದುಷ್ಟ । ಜನರ ಸಂಹರಿಸುತ್ತ । ಘನ ರಕ್ತಪಾನವ । ನನುದಿನ ಮಾಳ್ಪಳು ॥ ನೋಡಿದೆಯಾ ॥ ೨ ॥ ವನಿತೆಯಿವಳು ನಮ । ಗೆನುತ ಗ್ರಹಿಸುತಿಹೆ । ಕ್ಷಣದಿ ಚಂಡಿಯ ರೂಪ । ವನುಕರಿಸುವಳು ॥ ಕಿಸಿಸಿನಿಂದಿವಳನ್ನು । ಕನಲಿಸಬೇಡಿನ್ನು । ಮನೆಗೊಯ್ದು ಮನ್ನಿಸೀ । ಗನುಮಾನವಿಡದೆ ॥ ನೋಡಿದೆಯಾ ॥ ೩ ॥ ಎಂದು ಮಾರುತಿ ಪೇಳ । ಲಂದು ನರನು ಪುತ್ತಾ । ಮಂದಗಮನೆಯುಳ । ಚಂದದಿ ಕರೆದು ॥ ಮಂದಿರಕಾಗಲ । ಯ್ತಂದು ಸುಖದೊಳಿರ । ಲಂದವರಿತು ಭೀಮ । ಬಂದನು ಮನೆಗೆ ॥ ನೋಡಿದೆಯಾ ॥ ೪ ॥

ಭಾಮಿನಿ

ಧರಣಿಪತಿ ಕೇಳಿಂತು ಪಾಂಡವ । ರಿರಲಿಕಿತ್ತಲು ಸೂರ್ಯನುದಯಕೆ । ಪುರದ ಜನರೆಚ್ಚತ್ತು ತಮ್ಮಯ ನಿತ್ಯವಿಧಿಗಳನು ॥ ವಿರಚಿಸುತಲಿರಲಾಗ ಮನದಲಿ । ಹರುಷವಾಂತು ವಿವಾಹವೆಸಗಲು । ಪರಮಪುರುಷನು ಬಂದು ಪೊಕ್ಕನು ದ್ವಾರಕಾಪುರವ ॥ ೧ ॥

ಕಂದ

ಖಗವಾಹನ ಪ್ರತ್ಯೂಷದಿ । ನಗರವ ಪೊಗುತಂದು ಜವದೊಳೋಲಗವಿತ್ತುಂ ॥ ಮಿಗುವರಿವಾನಂದದಿ ನಸು । ನಗುತಲಿ ರುಕ್ಮಿಣಿಯ ಕರೆದು ಬಳಿಕಿಂತೆಂದಂ ॥ ೧ ॥

ರಾಗ ಸುರುಟಿ ಏಕತಾಳ

ಹರಿಣಾಕ್ಷಿಯೆ ಕೇಳು । ಮನಸಿನೊ । ಳುರೆ ಸಂತಸ ತಾಳು ॥ ಸ್ಮರಸಿಗೆ ಲಗ್ನವ ವಿರಚಿಸಲೋಸುಗ । ವರಕನ್ನಿಕೆಯನು ಸ್ಥಿರಗೊಳಿಸಿದೆನು ॥ ೧ ॥ ಅದಕಾಗುವುದೆಲ್ಲ । ಸನ್ನಹ । ಒದಗಿಸಬೇಕಲ್ಲ ॥ ಮುದದಲಿ ಮಗನಿಗೆ ಮದುವಣಿಶಾಸ್ತ್ರದ । ವಿಧಿಯೆಸಗೆಲೆ ನೀ ಪದುಮದಳಾಂಬಕಿ ॥ ೨ ॥ ಹದಿನೈದನೆ

ಲೇಖನೆವ ವಾಚಿಸಿ ಸಹೋದರರ । ಕರೆದಾಗ ಮನ್ಮಥನ ಲಗ್ನವೃತ್ತಾಂತಮಂ ಸಾಂಗಮೆನೆ ವಿವರಿಸಿದನು ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಶ್ರೀಮನೋಹರರತ್ನ ತರಳ ಮನ್ಮಥನಿಗೆ । ಪ್ರೇಮದಿ ಲಗ್ನವನು ॥ ನಾ ಮಾಳ್ಪೆ ನೀವೆಲ್ಲ ಬಹುದೆಂದು ಬರೆದಿಹ । ನೀ ಮಹಾ ಲಿಖಿತವನು ॥ ೧ ॥ ಪೋಗಲೇಬೇಕು ನಾವೀಗಲೆನುತ್ತತಿ । ವೇಗದಿ ಧರ್ಮಜನು ॥ ನಾಗವೇಣಿಯು ನೊಡಗೊಂಡನುಜರು ಸಹಿ । ತಾಗ ತಾನಯ್ತಂದನು ॥ ೨ ॥ ಬಂದರು ಪಾಂಡವರೆಂದೆನುತಲಿ ಚರ । ರಂದು ಸೂಚಿಸೆ ಹರಿಯು ॥ ಚಂದದಿಂದಿದಿರಾಗುತರಮನೆಗೊಯ್ದು ತಾ । ನಂದುಪಚರಿಸಿದನು ॥ ೩ ॥

ರಾಗ ಸಾಂಗತ್ಯ ರೂಪಕತಾಳ

ಬಂದಿರೇ ಪಾಂಡವರೆಲ್ಲ ನೀವೆಮ್ಮಯ । ಮಂದಿರಕಾಗಿ ಪ್ರೀತಿಯಲಿ ॥ ಮುಂದಣ ಕಾರ್ಯ ನಿಮ್ಮಿಂದಾಗಬೇಕೆಂದು । ಮಂದರಧರನುಸಿರಿದನು ॥ ॥ ೧ ॥ ಅಂದು ಕೌರವಭೂಪನಿಂದತಿ ಬಳಲಿದಿ । ರಿಂದು ಕ್ಷೇಮಿಗಳೆ ಭಾವಯ್ಯ ॥ ಮಂದಮತಿಗಳು ತಮ್ಮಿಂದ ತಾವಳಿದರು । ಮುಂದಿನ್ನು ಭಯ ವಿಲ್ಲ ನಿಮಗೆ ॥ ೨ ॥ ತಂಗಿ ಬಂದುದರಿಂದ ಸಂತೋಷವಾಯಿತು । ಶೃಂಗಾರ ವನು ರಚಿಸೆನಲು ॥ ಹಿಂಗದೆ ಭರದಿ ರುಕ್ಮಿಣಿ ಮುಖ್ಯ ಸ್ತ್ರೀಯರು । ಮಂಗಳ ಕನುಸರಿಸಿದರು ॥ ೩ ॥ ಇಂತೀ ಪರಿಯೊಳಾಗ ಸಕಲ ಸನ್ನಾಹದಿ । ಕಂತು ಜನಕನನುಜ್ಞೆಯಲಿ ॥ ಅಂತಕಾಂತಕನನ್ನು ಸ್ಮರಿಸುತ್ತ ಬಂದರಾ । ಸಂತ ಋಷಿಗಳು ಪ್ರೇಮದಲಿ ॥ ೪ ॥ ಮನ್ಮಥನಿಂಗಲಂಕರಿಸಿ ಬಾಸಿಗವನ್ನು । ಸನ್ಮತದಲಿ ಸುದತಿಯರು ॥ ಸುಮ್ಮಾನದಲಿ ಕಟ್ಟಿ ತಳಿದಕ್ಷತೆಯನಾಗ । ಕಮ್ಮ ಗೋಲನ ಹರಸಿದರು ॥ ೫ ॥ ಆ ಸಮಯದಿ ಭೇರಿಘೋಷ ದುಂದುಭಿಯಿಂದ । ಲೇಸಾದ ನಾಗವೇಣಿಯರ ॥ ಭೂಸುರನಿವಹವನೊಡಗೊಂಡು ದಿಬ್ಬಣ । ತೋಷದಿಂದಲಿ ಪೊರಡುತಿರೆ ॥ ೬ ॥ ವನಜಾಕ್ಷನಾಗಲೆ ವಿನತೆಯಾತ್ಮಜ ನನ್ನು । ಕನಿಕರದಲಿ ಕರೆದೆಂದ ॥ ವಿನಯದಿ ದಿಬ್ಬಣಿಗರನೆಲ್ಲ ಪೊತ್ತು ನೀ । ಘನವೇಗದೊಳು ಗಮಿಸೆನಲು ॥ ೭ ॥

ಭಾಮಿನಿ

ಮಂದರಾಧರನಾಜ್ಞೆಯಿಂದಲಿ । ಚಂದದಲಿ ದಿಬ್ಬಣಿಗರೆಲ್ಲರು । ಬಂದು ಗರುಡನ ಮೇಲೆ ಕುಳಿತರು ಬಳಿಕ ಮಾಧವನು ॥ ಇಂದುಧರ ಕಮಲಾಸ

ಗಳಿಗೆ । ಲಗ್ನವು । ಒದಗಿಹುದದರೊಳಗೆ ॥ ಮುದದಲಿ ಕಮಲಾವತಿಪುರ ಕೀಗಲೆ । ಯದುಪರಿವಾರವು ಸುದತಿಯರೆಲ್ಲರು ॥ ೩ ॥ ತೆರಳುವುದೀ ಕ್ಷಣದಿ। ದಿಬ್ಬಣಿ । ಗರು ಸಹಿತತಿ ಮುದದಿ ॥ ತರುಣಿಯೊಳಿಂತೀ ಪರಿಯಲಿ ನುಡಿದಾ । ಮುರಹರನುದ್ದಿದನರಮನೆಗಾಗಲೆ ॥ ೪ ॥

ಭಾಮಿನಿ

ಅರಸನೆಂದುದ ಕೇಳುತಾ ಕ್ಷಣ । ಭರದಿ ರುಕ್ಮಿಣಿ ಬಂದು ತನ್ನಯ । ತರಳನಿಗೆ ನೀರೆರೆದು ವಿಧ್ಯುಕ್ತಪ್ರಕಾರದಲಿ ॥ ವಿರಚಿಸಲು ಬಳಿಕಿತ್ತ ಲಕ್ಷ್ಮೀ । ವರನು ಮನದಲಿ ಗರುಡನನು ತಾ । ಸ್ಮರಿಸಲದನರಿತಾಗಲಯ್ತಂದನು ಸರಾಗದಲಿ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಹರಿ ನಮೋ ಎಂದಾ ಸುಪರ್ಣನು । ಚರಣಸಾರಸಕೆರಗುತೆಂದನು । ಭರದೊಳೆನ್ನನು ಸ್ಮರಿಸಿದಂಥಾ । ಪರಿಯದೇನು ॥ ೧ ॥ ಗರುಡ ಲಾಲಿಸಿ ಕೇಳು ನಮ್ಮಯ । ತರಳನಹ ಮನ್ಮಥಗೆ ಲಗ್ನವ । ವಿರಚಿಸಲ್ಕೆಂಡೆನುತ ನೆನೆದಿಹೆ । ಹರುಷದಿಂದ ॥ ೨ ॥ ಅದಕೆ ತನ್ನಿಂದಾಹ ಸೇವೆಯ । ವಿಧವನರಿತೀ ಗುಸಿರಿದರೆ ತಾ । ನೊದಗಿಸುವೆ ಬೇಗೆನಲು ಪೇಳಿದ । ಮದನಜನಕ ॥ ೩ ॥ ಗರುಡ ಕೇಳ್ಳೆ ಸಕಲ ದೇಶದ । ಧರಣಿಪಾಲರಿಗಿಂದು ಲಿಖಿತವ । ಬರೆಸಿ ಕೊಡುವೆನು ತೋರುತವರಿಗೆ । ಕರೆತರುವುದು ॥ ೪ ॥ ಎಂದು ಲಿಖಿತವ ಬರೆಸಿ ಕೊಡಲಾ । ನಂದದಲಿ ವಿನತಾಸುತನು ಬಲ । ವಂದು ಹರಿಯಡಿಗೆರಗಿ ಪೊರಟನು । ಚಂದದಿಂದ ॥ ೫ ॥

ಭಾಮಿನಿ

ಸಿರಿಯರಸನಪ್ಪಣೆಯನಾಂತಾ । ಗರುಡದೇವನು ತನ್ನ ಮನದಲಿ । ಹರಿಯ ಸ್ಮರಿಸುತ ಗಮಿಸಿ ಲಿಖಿತವ ತೋರಿ ಸರ್ವರಿಗೆ ॥ ಸರಸಿಜೋದ್ಭವ ರುದ್ರ ಮತ್ತಾ । ಸುರಪ ಮುಖ್ಯಾದ್ಯಮರರೆಲ್ಲರ । ಕರೆತರುತ ನಡೆತಂದು ಪೊಕ್ಕನು ದ್ವಾರಕಾಪುರವ ॥ ೧ ॥

ವಾರ್ಧಿಕ

ಧರೆಯಧಿಪ ಕೇಳಿಂತು ನಡೆತಂದ ಬೊಮ್ಮಾದಿ । ಸುರರ ಸತ್ಕರಿಸುತ್ತ ಶ್ರೀ ಕೃಷ್ಣ ಬಳಿಕ ಸ । ತ್ವರದಿ ಪಾಂಡವರಿಂಗೆ ಪ್ರತ್ಯೇಕ ಲಿಖಿತಮಂ ಬರೆಸಿದಂ ಕಳುಹಲಂದು ॥ ಚರರು ನಡೆತಂದಾ ಯುಧಿಷ್ಠಿರಂಗೀಯಲತಿ । ಹರುಷದಿಂ

ನಾವ್ಯರು । ವೃಂದವಮರರವೆರಸಿ ಕುಂತೀ । ನಂದನರು ಸಹಿತೇರಿ ಮುಂಡಿಸಿ ದರು ವಿನೋದದೊಳು ॥ ೧ ॥

ವಾರ್ಧಿಕ

ಧರಣಿಪತಿ ಲಾಲಿಸೀ ಪರಿಯಿಂದ ದಿಬ್ಬಣಕೆ । ನೆರೆದ ಜನವಂತಿರಲಿ ಬಳಿಕೀ ಭವಾಂಡವುಂ । ಧರಿಸಿರ್ಪ ಹರಿಹರಬ್ರಹ್ಮಾದಿಗಳ ಭಾರವಿಂದೆ ತಾನೊರ್ವ ನಂದು ॥ ಗರುಡನಾಂತನು ಪಕ್ಕವೊಂದರೊಳಗಾ ಫಣೀ । ಶ್ವರಗರಿದು ಪೊಗ ಳಲ್ಕೆ ಸತ್ತ್ವವಿನ್ನೆಂತುಟೋ । ಪರಮಾತ್ಮಭಕ್ತರಿಂಗಾವುದೈ ದೊಡ್ಡಿತೆನುತರು ಹಿದನು ನೃಪಗೆ ಮುನಿಪ ॥ ೧ ॥

ದ್ವಿಪದಿ

ಭೂಪಾಲ ಕೇಳಿಂತು ದಿಬ್ಬಣವ ಕೂಡಿ । ಶ್ರೀಪತಿಯು ಪೊರಟನತಿ ಮುದ ದೊಳೋಲಾಡಿ ॥ ೧ ॥ ವನಜಾಕ್ಷ ರುಕ್ಮಿಣಿಯು ಸಾಂಬ ಸಹಿತಾಗಿ । ಅನು ವರಿತು ಗರುಡನಲಿ ಕುಳಿತು ಲೇಸಾಗಿ ॥ ೨ ॥ ಬಿರುದುಗಳ ಪೊಗಳುತೀ ಪರಿಯ ಪಾಠಕರ । ವರ ಭೇರಿಯನು ಹೊಡೆಸಿ ನಡೆವ ನಾಟಕರ ॥ ೩ ॥ ವಿನಯದಿಂದೊಡಗೂಡಿ ಮುಂದೆ ಮಾರ್ಗದೊಳು । ಘನ ವೇಗದಿಂದ ಬರು ತಿರಲಂಬರದೊಳು ॥ ೪ ॥ ಘೋರ ಕಾನನವೊಂದು ಕಣ್ಗೆ ಗೋಚರಿಸಿ । ತೋರುತಿರ್ದುದು ಬಹಳ ಭಯವನಾವರಿಸಿ ॥ ೫ ॥ ಮೆರೆದಿರ್ಪುದಾ ವನ ಕ್ಕೊಡೆಯನಾಗಿರುವ । ದುರುಳ ಮೇಘಾಸುರನು ತಿಳಿದನಿವರಿರವ ॥ ೬ ॥ ಅವನನುಜೆ ಮೇಘಸ್ತನಿಯು ತಿಳಿದು ಬಂದು । ಜವದಿ ದಿಬ್ಬಣ ತಡೆದಳಡ ಹಾಯ್ದು ನಿಂದು ॥ ೭ ॥ ಪಕ್ಷಿಯನು ತಿಂಬೆನೆನ್ನುತ ಬಾಯ ಕಳೆದು । ಆ ಕ್ಷಣದಿ ಬಂದಿರುವ ಬಗೆಯ ಹರಿ ತಿಳಿದು ॥ ೮ ॥ ಕರದೊಳಗೆ ಚಕ್ರವನು ಧರಿಸಿ ತಾ ಬೇಗ । ಬರಲು ಕಂಡವನೊಡನೆ ಪೇಳ್ದಳವಳಾಗ ॥ ೯ ॥

ರಾಗ ಮಾರವಿ ಅಷ್ಟತಾಳ

ಆರೊ ಬಂದವನು । ಈ ವಿಪಿನಕೆ । ನ್ನಾರೊ ಬಂದವನು ॥ ಪ ॥ ಭೂರಿ ತೋಷದಿಂದಲಿಂಥ । ಘೋರ ಕಾನನಕ್ಕೆ ನಿಮ್ಮ । ನಾರಿಯರನು ಸೇರಿ ಬಂದ । ಕಾರಣಗಳ ಬೇಗ ಪೇಳ್ಳೈ ॥ ಆರೊ ॥ ೧ ॥ ನರರ ಮಾಂಸ ಮೆಲದೆ ತೊಡುವಿ । ಛಿರುವ ಸಮಯದಿ ಬಂದು ತನ್ನ । ಕರದಿ ಸಿಕ್ಕಿದ ಮೇಲೆ ಬಿಟ್ಟರೆ । ಬರುವುದೆನಗಪಕೀರ್ತಿ ಭುವದರಲಿ ॥ ಆರೊ ॥ ೨ ॥ ತಂಡತಂಡದೊಳಿರುವ ಬಲ ವನು । ತುಂಡುತುಂಡುಗೆಯ್ವುತೆಣ್ಣೆಯ । ಭಾಂಡದಲ್ಲಿ ಹುರಿದು ಕರಿದು । ಗಂಡಸಿಂಗುಣಬಡಿಸಿ ತಿನುವೆನು ॥ ಆರೊ ॥ ೩ ॥ ಎಂದ ನುಡಿಯ ಕೇಳು

ತಾಗ । ಮಂದರಾದ್ರಿಧರನು ರೋಷ । ದಿಂದ ಪೇಳ್ದನವಳ ಮುಂದೆ । ನಿಂದು ಬಳಿಕವ ಕೋಪಿಸುತ್ತಲಿ ॥ ಆರೊ ॥ ೪ ॥

ರಾಗ ಶಂಕರಾಭರಣ ಮಟ್ಟೆತಾಳ.

ದನುಜೆ ಕೇಳೆ ಕೂಗದೀಗ । ವಿಷಯದಿಂದ ಸಾರು ಪಿಂದೆ । ದಿನಪನಣುಗ ನಿಳಿಪು ತೋರ್ಪೆ । ನಿನಗೆ ನಿಮಿಷದಿ ॥ ೧ ॥ ಎಲವೊ ಮನುಜ ಕೇಳು ನಿನ್ನ । ಬಲವನೆಲ್ಲ ತಿಂಬೆನೆಂದು । ಛಲದಿ ಬಂದೆನಿಲ್ಲಿ ನಾನು । ಗೆಲವಿನಿಂದಲಿ ॥ ೨ ॥ ಭ್ರಷ್ಟೆ ಮೂಳಿ ದೂರ ನಿಲ್ಲು । ಕುಟ್ಟಿ ನಿನ್ನ ಶಿರವನರಿವೆ । ಪೆಟ್ಟು ತಿನದೆ ಪೋಗು ಮನೆಗೆ । ತಟ್ಟನೀಗಳೆ ॥ ೩ ॥ ಇಷ್ಟು ನುಡಿದ ಮೇಲೆ ನಿನ್ನ । ಬಿಟ್ಟು ಪೋಗೆ ನಾನೆನುತ್ತ । ಮುಷ್ಟಿಯಿಂದ ತಿವಿದಳಾಗ । ದುಷ್ಟ ರಕ್ಕಸಿ ॥ ೪ ॥ ಸೊಕ್ಕಿನಿಂದ ಮಿಕ್ಕುಪರಿದ । ರಕ್ಕಸಿಯನು ಕಂಡು ಬಳಿಕ । ಚಕ್ರದಿಂದ ಶಿರವ ನರಿದು । ನಕ್ಕು ನಿಂದನು ॥ ೫ ॥

ಭಾಮಿನಿ

ದುರುಳೆ ಮೋಘುಸ್ತನಿಯ ರಣದಲಿ । ಹರಿಯು ತಾ ಸಂಹರಿಸಿ ಮತ್ತಾ । ನಿರದೆ ಮುಂದಕೆ ತೆರಳಿ ದಿಬ್ಬಣಸಹಿತ ವಿಭವದಲಿ ॥ ಭರದಿ ನಡೆತರಲದನು ಪರಿಕಿಸು । ತುರುತರದ ಕೋಪದಲಿ ಮೋಘಾ । ಸುರನು ನಡೆತಂದಾಗ ತಡೆದನು ಹರಿಯ ಭೋರ್ಗುಡಿಸಿ ॥ ೧ ॥

ರಾಗ ಭೈರವಿ ಏಕತಾಳ

ಎಲವೋ ನರಗುರಿ ಕೇಳು । ನೀ । ನಿಲದಿಹುದೆನ್ನಿದಿರಿನೊಳು ॥ ಸಲುವುದೆ ಪಂಥವು ನಿನಗೆ । ತವ । ತಲೆಯ ಕಡಿವೆನೀ ಗಳಿಗೆ ॥ ೧ ॥ ಹರ ಮುನಿದರೆ ಭಯವಿಲ್ಲ । ಸುರ । ವರರೊಳಗೆನಗಿದಿರಿಲ್ಲ ॥ ಧರೆಯೊಳಗಿಹ ಜನರುಗಳು । ಗೆಲ । ಲರಿಯರೆನ್ನ ಸಮರದೊಳು ॥ ೨ ॥ ಎನ್ನಯ ಹರಿಬಕೆ ನೀನು । ನಿಲೆ । ನಿನ್ನನು ಕೊಲುವೆನು ನಾನು ॥ ಮುನ್ನ ನೀನಾರೆಂಬುದನು । ಪೇ । ಳೆನ್ನೊಳು ಸಂಶಯವೇನು ॥ ೩ ॥ ನರಗುರಿ ನಿನ್ನನು ತಿನದೆ । ಬಿ । ಟ್ಟರೆ ಕೀರ್ತಿಯು ತನಗಿಹುದೆ ॥ ಪರಿಕಿಸಿ ನೋಡೆಂದೆನುತ । ಖಳ । ನಿರೆ ಹರಿ ಪೇಳ್ದನು ನಗುತ ॥ ೪ ॥

ರಾಗ ಪಂಚಾಗತಿ ಮಟ್ಟೆತಾಳ

ಎಲವೊ ದನುಜ ಕೇಳು ನೀನು । ಸಲುಗೆಯಿಂದ ಪ್ರಾಣವನ್ನು । ಕಳೆಯ ಬೇಡ ಪೋಗು ನಿನ್ನ । ನಿಳೆಯಕೀಗಳೆ ॥ ಖಳವಿರೋಧಿಯೆಂಬರೆನಗೆ । ಹಲವು

ಮಾತನಾಡಿ ಜರಿವೆ । ಫಲವದೇನು ಪೋಗದಿರಲು । ಕೊಲುವೆನೆಂದನು ॥ ೧ ॥ ಎಂದ ಮಾತ ಕೇಳಿ ದೈತ್ಯ । ನೆಂದ ಲಕ್ಷ್ಮೀರಮಣನೊಡನೆ । ಮುಂದುವರಿದ ರೀಗ ನಿನ್ನ । ಕೊಂದು ಕಳೆವೆನು ॥ ಹಿಂದೆ ರಾಕ್ಷಸರನು ನೀನು । ಕೊಂದೆ ನೆಂಬ ಗರ್ವವೆನ್ನೊ । ಳಿಂದು ನಡೆಯದಾಹವಕ್ಕೆ । ನಿಂದು ನೋಡೆಲಾ ॥ ॥ ೨ ॥ ಖೂಳ ನಿನ್ನ ಜಯಿಸಲಿಂದು । ಮೌಳಿಕೃಪೆಯದೆಂತಿರುವುದೊ । ಕಾಳಗ ದೊಳು ನೋಳ್ಪೆನೀಗ । ಲಾಳುತನವನು ॥ ತಾಳು ತಾಳು ನಿಮಿಷದೊಳಗೆ । ಬೀಳಗೆಡೆವೆನೆನುತಲಸ್ತ್ರ । ಜಾಲವನ್ನು ಸುರಿದನಾಗ । ಪೇಳಲೇನದ ॥ ೩ ॥ ಮಸಿನಿಭಾಂಗ ನೀನು ಧುರದೊ । ಳಸಮಸಹಸಿಯೆನುತ ಬರುವ । ವಿಶಿಖ ಗಳನು ಖಂಡಿಸುತ್ತ । ಲೆಸೆದನವ ಶರ ॥ ಬಿಸಜನೇತ್ರ ರೋಷದಿಂದ । ಲಸುರ ನೆಚ್ಚ ಬಾಣಗಳನು । ನಸುನಗುತ್ತ ಮಧ್ಯಪಥದಿ । ಕುಸುರಿ ತರಿದನು ॥ ೪ ॥ ಬಳಿಕ ಹರಿಯು ಮನದೊಳಾಗ । ತಿಳಿದನಿವನ ಜೇಗ ರಣದಿ । ಕೊಲುವೆನೆನುತ ಚಕ್ರವನ್ನು । ಸೆಳೆದು ಬಿಸುಟನು ॥ ತಳುವದಾಗ ಕಿಡಿಯುಗುಳಿ । ಖಳನ ಶಿರವನರಿದು ತಿರುಗಿ । ನಳಿನನಾಭನೊಡನೆ ಬಂದು । ನೆಲಸಿತಾಗಲೆ ॥ ೫ ॥

ಭಾಮಿನಿ

ಧರೆಯಧಿಪ ಕೇಳಿಂತು ಸಮರದಿ । ಹರಿಯು ಮೇಘಾಸುರನ ಕೆಡಹಲು । ಸ್ಮರರು ಕಾಣುತ ಪುಷ್ಪವೃಷ್ಟಿಯ ಕರೆದರಾ ಕ್ಷಣದಿ ॥ ಪರಿಪರಿಯ ವಿಭವ ದೊಳು ದಿಬ್ಬಣ । ವೆರಸಿ ಕಮಲಾವತಿಗೆ ಬರಲದ । ನರಿತು ಚರರಯ್ತಂದು ಬಿನ್ನವಿಸಿದರು ಭೂಪತಿಗೆ ॥ ೧ ॥

ರಾಗ ದೇಶಿ ಅಷ್ಟತಾಳ

ಲಾಲಿಸೈ ಕಮಲಾವತಿಧೊರೆಯೆ ನೀ । ಜಾಲವಲ್ಲಿದು ಕೇಳು ಸದ್ಗುಣ । ಪಾಲನೇ ಪರಿತೋಷದಿ ॥ ೧ ॥ ದ್ವಾರಕೆಯಿಂದ ದಿಬ್ಬಣಸಹಿತಲೆ । ಮಾರ ಪಿತನಯ್ತಂದ ತನ್ನ ಕು । ಮಾರ ಸ್ಮರನ ವಿವಾಹಕೆ ॥ ೨ ॥ ನಾರಿ ದ್ರೌಪದಿ ದ್ರುಪದರಾಯನ ಸುಕು । ಮಾರಿ ಸಲೆ ವಯ್ಯಾರಿ ಬಲು ಶೃಂ । ಗಾರಿ ಬಂದಿಹ ಳಿಲ್ಲಿಗೆ ॥ ೩ ॥ ಮನ್ನಿಸೈ ದಿಬ್ಬಣಿಗರನೆಲ್ಲರ । ಸನ್ಮತದೊಳಿದಿರ್ಗೊಂಡು ಕರೆ ತಂ । ದಿನ್ನು ಕಾರ್ಯವ ಮಾಳ್ಪುದು ॥ ೪ ॥ ಎಂದ ಮಾತನು ಕೇಳುತ್ತ ಭೂಪನು । ಚಂದದಿಂ ತನ್ನಾಪ್ತಜನಸಹ । ಬಂದಸಿದಿರ್ಗೊಳಲೆನುತಲೆ ॥ ೫ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕಲಶಗನ್ನಡಿ ಮುತ್ತಿನಾರತಿ । ತಳಿರುತೋರಣದಿಂದ ಭೂಮಿಪ । ಲಲನೆ

ಯುಂನೊಡಗೊಂಡು ಪೊರಟನು । ನಲವಿನಿಂದ ॥ ೧ ॥ ಹೊಡೆಸಿದನು ವರ ಭೇರಿ ದುಂದುಭಿ । ಯೊಡನೆ ನಾನಾ ಪರಿಯ ವಿಭವದಿ । ಸಡಗರದೊ ಳಯ್ತಂದನಾ ಕ್ಷಣ । ದೃಢತರವೊಳು ॥ ೨ ॥ ಬಂದುದನು ಕಾಣುತ್ತ ಹರಿ ತಾ । ನಂದು ಗರುಡನಿಳಿದು ತನ್ನಯ । ಬಂಧುಜನ ಸಹಿತಾಗಲತ್ಯಾ । ನಂದದಿಂದ ॥ ೩ ॥

ಭಾಮಿನಿ

ಧರಣಿಪತಿ ಕೇಳಿಂತು ಕಮಲೇ । ಶ್ವರನು ದಿಬ್ಬಣಿಗರನು ಮನ್ನಿಸಿ । ಭರದಿ ಕರವಿಡಿದೊಳಗೆ ಕರೆತಂದಾಗ ಸಭೆಯೊಳಗೆ ॥ ತರತರದಿ ಕುಳ್ಳಿರಿಸಿ ಬಾಗಿಲ । ಹೊರಗೆ ನಿಲಿಸಿದ ಮೂರುಕೋಟಿಯ । ಚಂರ ಬಳಿಕಾ ಹಂಯ ಕುಶಲವ ಕೇಳಿದನು ನೃಪತಿ ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಬಂದಿರೆ ದ್ವಾರಕೆಯಿಂದ ಶ್ರೀಲಕ್ಷ್ಮೀಶ । ಚಂದವೆ ಸರ್ವ ಮೋಹರಕೆ ॥ ಇಂದು ನೀವಿಲ್ಲಿಗಯ್ತಂದುದರಿಂದಲಾ । ನಂದವಾದುದು ಸರ್ವಜನಕೆ ॥ ೧ ॥ ಹರಿಹರಾದಿಗಳಿಗೆ ಸರಸಿಜಾಸನ ಮುಖ್ಯ । ಸುರನಾಥಾದ್ಯಮರರಿಂಗೆಲ್ಲ ॥ ಪರಿತೋಷದಲಿ ಬಿಡಾರವನಿತ್ತು ಮನ್ನಿಸಿ । ಹರುಷದಿ ದಿಬ್ಬಣಿಗರನು ॥ ೨ ॥ ಹಾಲು ಸಕ್ಕರೆ ಹಣ್ಣು ಎಳೆನೀರಿನಿಂದಲಿ । ಲೀಲೆಯೊಳುಪಚರಿಸುತಲಿ ॥ ಮೇಲಾದ ಸಾಹಿತ್ಯಗಳನೆಲ್ಲ ಕೊಡಿಸಿ ಭೂ । ಪಾಲ ಮಾನಿನಿಯೊಳಿಂತೆಂದ ॥ ॥ ೩ ॥ ನೀರೆ ನೀ ಕೇಳೆ ದಿಬ್ಬಣದೊಡನಯ್ತಂದ । ನಾರಿಯರನು ಕರೆತಂದು ॥ ಓರಂತೆ ಮನ್ನಿಸಿ ಪರಿಪರಿಯಿಂದುಪ । ಚಾರವ ಗೆಯ್ಯುವೆಂದೆನಲು ॥ ೪ ॥

ರಾಗ ಕೇದಾರಗೌಳ ಅಷ್ಟತಾಳ

ಅರಸನಾಜ್ಞೆಯೊಳಾಗ ತರುಣಿಮಣಿಯು ಬಳಿ । ಕುರುತರ ಪ್ರೇಮದಲಿ ॥ ಭರಿತ ವಿನೋದದಿಂದಿದಿರ್ಗೊಂಡು ಮನ್ನಿಸಿ । ತರುಣಿಯರೆಲ್ಲರಿಗೆ ॥ ೧ ॥ ಹಾಲು ಸಕ್ಕರೆ ಹಣ್ಣು ಎಳೆನೀರ ಕೊಡಿಸುತ್ತ । ಮೇಲುಪಚಾರದಲಿ ॥ ಸಾಲಿನೊಳವರ್ಗೆ ಬಿಡಾರವನೊದಗಿಸಿ । ಲೀಲೆಯಿಂದಯ್ತಂದಳು ॥ ೨ ॥ ಕಮಲಭೂಪನು ದ್ರೌಪದಿಯ ಬಳಿಗಯ್ತಂದು । ನಮಿಸಲು ಕಾಣುತ್ತಲೆ ॥ ಕಮಲಾಕ್ಷ ದಯೆದೋರಿದನು ನಿನಗೆನಲು ಭೂ । ರಮಣ ಮತ್ತಿಂತೆಂದನು ॥ ೩ ॥

ರಾಗ ಸುರುಟಿ ಏಕತಾಳ

ಲಾಲಿಪುದೆಲೆ ತಾಯೆ । ಸದ್ಗುಣ । ಶೀಲೆ ವಿಮಲಕಾಯೆ ॥ ಶ್ರೀಲತಾಂಗಿ ರಮಣ । ಪರಮ ಕೃ । ಪಾಳು ದೀನೋದ್ಧರಣ ॥ ೧ ॥ ನಿನ್ನ ಕೃಪೆಯೊಳೀಗ ।

ದೊರಕಿದ । ಚಿನ್ಮಯ ತಾ ಬೇಗ ॥ ಎನ್ನ ದುರುಕ್ತಿಯನು । ಕ್ಷಮಿಸುವು ದಿನ್ನೆನುತೆರಗಿದನು ॥ ೨ ॥

ರಾಗ ಸಾಂಗತ್ಯ ರೂಪಕತಾಳ

ಬಳಿಕ ಭೂಪಾಲನು ಲಲನೆಯರನು ಕರೆ । ದೊಲವಿನಿಂದಲಿ ಪೇಳ್ದನಾಗ ॥ ಚೆಲುವೆ ನಮ್ಮಯ ಸುತೆಯಳ ಸಿಂಗರಿಸಿರೆನೆ । ಲುಲಿದವರೆಲ್ಲರೊಂದಾಗಿ ॥ ೧ ॥ ಅರಸನಪ್ಪಣೆಯೊಳು ಸರಸಿಜಾಕ್ಷಿಯರೆಲ್ಲ । ತರುಣಿಯ ಸಿಂಗರಿಸಿದರು ॥ ಹರುಷದೊಳಾಗಲಾ ತರಳೆಯ ಮಂಟಪ । ಕಿರದೆ ತಂದರು ವಿಭವದಲಿ ॥ ॥ ೨ ॥ ಇಂತೀ ಪರಿಯೊಳಾಗ ದಂತಿಗಾಮಿನಿಯರ । ತ್ಯಂತ ಶೋಭಾನವ ಪಾಡಿ ॥ ಮಂತ್ರಘೋಷದಿ ತೆರೆವಿಡಿದಾಗ ವಿಪ್ರರಾ । ನಂತ ಸಂಭ್ರಮದಿಂದ ಲಿರಲು ॥ ೩ ॥ ಭೇರಿ ನಗಾರಿ ದುಂದುಭಿ ವಾದ್ಯರವದಿಂದ । ಭೂರಿ ವೈಭವ ದೊಳಗಂದು ॥ ಧಾರೆಯನೆರೆದುತ್ಸಹದೊಳಿರ್ದರಿಂತೆಂದು । ಭೂರಮಣನಿಗೆಂದ ಮುನಿಪ ॥ ೪ ॥

ಭಾಮಿನಿ

ಅರಸ ಕೇಳಿಂತಮಿತವಿಭವದಿ । ಹರಿಸುತಗೆ ನಂದನೆಯನಿತ್ತತಿ । ಕರುಣದಲಿ ಮನ್ನಿಸಿದ ಸರ್ವರ ಕಮಲಭೂಪಾಲ ॥ ಪರಿಪರಿಯ ಧನ ಕನಕ ವಸನಾ । ದ್ಯುರುತರದ ದಾನಂಗಳಲಿ ಭೂ । ಸುರಕುಲವ ಸಂತುಷ್ಟಿಪಡಿಸುತ್ತಿರ್ದ ನುತ್ಸಹದಿ ॥ ೧ ॥

ವಾರ್ಧಿಕ

ಧರಣೀಂದ್ರ ಕೇಳಿತ್ತ ಪರಿಪರಿಯ ವಿಭವದಲಿ । ಮೆರೆಯುತ್ತಲಿರಲತ್ತ ಮಾದ್ರೇಶಸುತನಾದ । ಧುರಧೀರನೆನಿಪ ಕೌಂಡ್ಲಿಕನೆಂಬ ವೀರ ತಾನುರು ತರದ ಶೌರ್ಯದಿಂದ ॥ ಇರುತಿರಲು ಕಮಲಾವತಿಯೊಳಾಹ ಲಗ್ನಮಂ । ಚರರು ತಿಳಿದಾಗಲಮ್ತಂದು ತಮ್ಮಾಳಿದನ । ಚರಣಕಾನತರಾಗಿ ಪೇಳಿದರು ವಿಸ್ತರಿಸಿ ಕಮಲಭೂಮಿಪನ ಕಥೆಯ ॥ ೧ ॥

ರಾಗ ಮುಖಾರಿ ಏಕತಾಳ

ಲಾಲಿಸಿ ಕೇಳು ಧೊರೆರಾಯ । ನಾವೆಂಬುದೀಗ । ಜಾಲಮಾತಲ್ಲವಿದು ಜೀಯ ॥ ಪ ॥ ಉತ್ತಮವಾದ ವಾರ್ತೆಯೊಂದ । ಕೇಳ್ದುದ ನಿಮ್ಮೊ । ಳರ್ತಿ ಯಿಂದೊರೆವೆ ಸಾಂಗದಿಂದ ॥ ಚಿತ್ತವನಿಟ್ಟದರನು ನೀ ಲಾಲಿಸು । ಬಿತ್ತರಿಸು ವೆವೈ ಹೊತ್ತುಗಳೆಯದೆ ॥ ಲಾಲಿಸಿ ॥ ೧ ॥ ಕಮಲಾವತಿಯ ಪುರದಲ್ಲಿ । ನಡೆದಾ ವಾರ್ತೆಯ । ಸಮನಾಗಿ ಪೇಳ್ವೆವೈ ನಾವಿಲ್ಲಿ ॥ ಸುಮಶರನಿಗೆ ತನ್ನಣು

ಗೆಯುನಾ ಭೂ । ರಮಣನು ಮದುವೆಯ ಕ್ರಮದಿಂ ರಚಿಸುವ ॥ ಲಾಲಿಸಿ ॥ ॥ ೨ ॥ ಸೋದರಳಿಯು ನೀನಿದ್ದಂತೆ । ಪರರಿಗೆ ಹೆಣ್ಣು । ತಾ ಧಾರೆಯೆರೆದು ಕೊಡುವನಂತೆ ॥ ನೀ ದಯಮಾಡೆಂತಾದರು ಕಾರ್ಯವ । ಸಾಧಿಸದಿರೆ ಮರ್ಯಾದೆ ಮುಂದಿಲ್ಲ ॥ ಲಾಲಿಸಿ ॥ ೩ ॥

ಭಾಮಿನಿ

ಚಾರರೆಂದುದ ಕೇಳುತಾ ಕ್ಷಣ । ಧೀರ ಕೌಂಡ್ಲಿಕಭೂಪತಿಯು ತಾ । ತೋರವಿಲಾಸೆಯು ತಿರುಹಿ ದೂತರ ಮೊಗವನೀಕ್ಷಿಸುತ ॥ ಭೂರಿಬಲ ಸಹ ತೆರಳಬೇಹುದು । ಸಾರಸಾವತಿನಗರಕೆನುತಲಿ । ಭೂರಮಣ ನೇಮಿಸುತ ಸಭೆಯೊಳಗೆಂದ ನಸುನಗುತ ॥ ೧ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಏನು ಭ್ರಮೆಯೈ ಮಾವನವರಿಗೆ । ಸಾನುರಾಗದಿ ಮತ್ತೆ ರತಿಯನು । ವಿಲಾಸಕೇತನಗಿತ್ತು ವ್ಯರ್ಥದಿ । ತಾನು ಕೆಟ್ಟ ॥ ೧ ॥ ಸೋದರಳಿಯನು ತಾನಿರಲು ಹಗೆ । ಯಾದ ಕೃಷ್ಣನ ಸುತನಿಗೀ ಪರಿ । ಭೇದದಿಂದಲಿ ಕೊಡುವ ನೆಂಬುದು । ಚೋದಿಗವಿದು ॥ ೨ ॥ ಪೋಗಿ ಕೇಳುವೆನೊಂದು ಮಾತನು । ನಾಗವೇಣಿಯನೆನಗೆ ಕೊಡದಿರೆ । ಭೋಗಿಭೂಷಣ ತಡೆಯೆ ಬಿಡೆನು ಸ । ರಾಗದಿಂದ ॥ ೩ ॥ ಹೊಡೆದು ದಿಗುಬಲಿಕೊಡುವೆ ಮಾವನ । ತಡೆಯಲಿತ್ತುಹ ಭಟರ ಜಯಿಸುವೆ । ನಡೆಯಲೈ ದಿಬ್ಬಣವು ಸಹಿತೆ । ಮ್ಮೊಡನೆ ಬೇಗ ॥ ೪ ॥

ರಾಗ ಶಂಕರಾಭರಣ ಮಟ್ಟೆತಾಳ

ಧೀರ ಮಾದ್ರಪತಿಯು ರಥವನೇರಿ ಖತಿಯೊಳು । ವಾರಿನಿಧಿಯ ಘೋಷ ದಿಂದಲಾರುಭಟೆಯೊಳು ॥ ಭೂರಿಬಲವು ಸಹಿತ ನಡೆದನಾಗ ನಲಿವುತ । ನಾರಿಯರ ಸಮೂಹವೆರಸಿ ಬಂದ ಕನಲುತ ॥ ೧ ॥ ಬಂದು ಮುಸುಕಿ ಕಮಲಾವತಿಯ ಪುರದ ದ್ವಾರದಿ । ನಿಂದ ಚರರ ಕಾಣುತಾಗಲಂದು ಕೋಪದಿ ॥ ಎಂದನೆಲವೊ ನಮ್ಮ ದಿಬ್ಬಣಿಗರ ಬೇಗದಿ । ಮುಂದೆ ಬಿಡವೆ ತಡೆಯೆ ನಿಮ್ಮನೀ ರಣಾಗ್ರದಿ ॥ ೨ ॥ ಕೊಂದು ಕಳೆವೆನೆನುತಲಾರುಭಟಿಸು ತಿರುತಿರೆ । ಮುಂದುವರಿದು ಮೂರು ಕೋಟಿ ಬಲವು ಬರುತಿರೆ ॥ ಸ್ಯಂದನ ದಲಿ ಕುಳಿತು ಸರಳಿನಿಂದಲವರನು । ಒಂದು ಬಾರಿ ಗೆಲಿದನೆರಡು ಕೋಟಿ ಬಲವನು ॥ ೩ ॥ ಬಲವು ನಾಶವಾಗೆ ಕಾಣುತುಳಿದ ಚಾರರು । ಸುಲಭವಲ್ಲ ರಣವಿದೆನುತಲೋಡುತಿರ್ದರು ॥ ಬಳಿಕ ಕೋಟಿಕೊತ್ತಳಗಳ ಮುರಿದು ನಿಮಿ

ಪದಿ । ಒಳಗೆ ಪೊಕ್ಕರೇನನೆಂಬೆನೈ ಸರಾಗದಿ ॥ ೪ ॥ ಭರದಿ ಬಂದು ಸಭೆಯು ನಾಗ ಪೊಕ್ಕು ನಗುತಲಿ । ಹರಿಯು ದಿಬ್ಬಣವನು ಕಂಡು ದೂರದಿಂದಲಿ ॥ ಭರಿತ ವಿಭವದಿಂದ ಮಂಟಪದೊಳು ಕುಳಿತನು । ಕರೆದು ಕಮಲಭೂಪ ನೊಡನೆ ಪೇಳ್ದನಾತನು ॥ ೫ ॥

ರಾಗ ಭೈರವಿ ಏಕತಾಳ

ಲಾಲಿಪುದೆಲೆ ಭೂವರನೆ । ಈ । ಖೂಳತನವನಾರೊಡನೆ ॥ ಜಾಲಿಸಿ ಕಲಿತೆಯೊ ನೀನು । ಮನ । ದಾಲೋಚನೆಗಳಿದೇನು ॥ ೧ ॥ ಸೋದರಳಿಯ ತಾನಿರಲು । ಬಿ । ಟ್ಟಾದರಿಸಿದೆ ನೀ ಬದಲು ॥ ಮಾಧವನಣುಗಗೆ ರತಿಯು । ನೀ । ಮೋದದೊಳೀವೆಯ ಜೀಯ ॥ ೨ ॥ ನಡವಳಿಕೆಯ ಪದ್ಧತಿಯು । ನೀ । ಬಿಡಬಹುದೇ ಸನ್ಮತಿಯು ॥ ಪೊಡವಿಪನೆಂಬರೆ ನಿನಗೆ । ಈ । ಕಡು ದ್ರೋಹವ ನೀನೆಸಗೆ ॥ ೩ ॥ ಕರೆಸೈ ಮಗಳನ್ನೀಗ । ಸಿಂ । ಗರಿಸೈ ನೀ ಬಲು ಬೇಗ ॥ ಬರಿದೇತಕೆ ತಡವಿನ್ನು । ಈ । ಪರಿಯನುಮಾನಗಳೇನು ॥ ೪ ॥ ಮಾವನು ನೀನೆಂಬುದಕೆ । ಸ । ದ್ಭಾವದಿ ನಾ ಪೇಳ್ವುದಕೆ ॥ ನೀವೊಲಿದೀ ಕ್ಷಣ ಸುತೆಯು । ಎನ । ಗೀವುದುಚಿತವಿದು ರಾಯ ॥ ೫ ॥

ರಾಗ ಬಿಲಹರಿ ಏಕತಾಳ

ಕಂದ ಕೌಂಡ್ಲಿಕ ನೀನು ಬಂದುದರಿಂದಲೆ । ಚಂದವಾದುದು ನಮಗಿಂದು ಸರ್ವರಿಗೆ ॥ ಮುಂದಗಮನೆ ರತಿ ಕಂದರ್ಪನರಸಿ ಹೀ । ಗೆಂದು ಪೇಳುವರಿನ್ನು ಸಂದೇಹವೇನು ॥ ೧ ॥ ಮಾನ ನೀ ಮರುಳಾದೆ ಸೋದರಳಿಯನಿರೆ । ದೇವಕಿ ಯಣುಗನ ಸುತನಿಗೆ ಹೆಣ್ಣ ॥ ಈವುದುಚಿತವಲ್ಲ ಬೇಗದೊಳಾ ರತಿ । ದೇವಿ ಯನೆನಗಿತ್ತು ಕರುಣಿಪುದೀಗ ॥ ೨ ॥ ಮೊದಲೆ ನಿನಗೆ ಮನಸಿಹುದೆಂದು ತಿಳಿದರೆ । ಮದನಗೆ ರತಿಯನೀವುದಕೊಪ್ಪೆನಯ್ಯ ॥ ಚದುರೆ ದ್ರೌಪದಿಗೆ ಭಾಷೆಯನಿತ್ತ ಕಾರಣ । ಬದಲು ಮಾತಿಲ್ಲ ನೀನದಕೆ ತೋಷಿಪುದು ॥ ೩ ॥ ಎನಗೊಂದು ಮಾತ ಪೇಳದೆ ಪರರಿಗೆ ಭಾಷೆ । ಯನು ಕೊಡಬಹುದೆ ಮಾವಯ್ಯ ನೀವಿಂದು ॥ ಇನಿತು ಚಾಳಿಸಿದರೆ ಬಿಡುವೆನೆ ತರಳೆಯು । ನೆನಗಿತ್ತು ಹರುಷದಿ ಕರುಣಿಪುದಯ್ಯ ॥ ೪ ॥ ನೀ ಮುನ್ನ ಬಾರದೆ ಸುಮ್ಮನೆ ಬಂದೀಗ । ಕಾಮಿನಿಮಣಿಯನ್ನು ಎನಗೀವುದೆನುತ ॥ ಈ ಮಹೋತ್ಸವಕೆ ವಿಘ್ನವನೆಸ ಗಲು ಪರಿ । ಣಾಮವೆಂತಹುದೊ ನೀ ತಿಳಿದು ನೋಡಿದನು ॥ ೫ ॥ ಸಂತಸ ದಿಂದ ನಿನ್ನಣುಗೆಯನೆನಗೆ ನಿ । ಶ್ಚಿಂತೆಯೊಳ್ ಮದುವೆಯನೆಸಗದೆ ಬರಿದೆ ॥ ಅಂತೆ ಕಾರಣಗಳಿಂದೆನಗೊಡಬಡಿಸಿದ । ರಿಂತು ಸೈರಿಪೆನು ಸ್ವತಂತ್ರವಲ್ಲಿನ್ನು ॥

ರಾಗ ಕೇದಾರಗೌಳ ಅಷ್ಟತಾಳ

ಎಷ್ಟು ಪೇಳಿದರೇನು ಕೊಟ್ಟ ಭಾಷೆಯ ತಪ್ಪಿ । ಹುಟ್ಟಿದಾತ್ಮಜೆಯನೀಗ ॥ ಕೊಟ್ಟರೆ ತನಗಪಕೀರ್ತಿಯು ಬಪ್ಪುದು । ತಟ್ಟನೆ ನಡೆಯೆಂದನು ॥ ೧ ॥ ಭ್ರಷ್ಟ ಮಾತಾಡದಿರೀಗ ನಿನ್ನಣುಗೆಯ । ಬಿಟ್ಟೀಗ ಪೋದರಾನು ॥ ಸೃಷ್ಟಿ ಪಾಲಕರಪಹಾಸ್ಯ ಮಾಳ್ಪರು ಮನ । ದಿಷ್ಟವ ಕರುಣಿಪುದು ॥ ೨ ॥ ಬಿಡು ಮನದಾಸೆಯ ಕೊಡುವವನಲ್ಲೆನ್ನ । ಹುಡುಗಿಯ ನಿನಗೆನಲು ॥ ಕಿಡಿ ಸೂಸು ತಲಿ ಧನು ಪಿಡಿದು ನಿಂದಿರೆ ಕಾಣು । ತೊಡನೆ ಭೂಮಿಪನೆಂದನು ॥ ೩ ॥

ರಾಗ ಶಂಕರಾಭರಣ ಮಟ್ಟೆತಾಳ

ಹುಡುಗನೆಂದು ಬಿಟ್ಟರೀಗ ಪಿಡಿದೆ ಧನುವನೆ । ಹುಡುಗಿಯಾಸೆ ಬಿಟ್ಟು ಮನೆಗೆ ನಡೆಯೊ ಗಮ್ಮನೆ ॥ ಬಿಡುವೆನಲ್ಲದಿರಲು ಶಿರವ ಕಡಿವೆನೀಗಲು । ಫಡ ಫಡೆಂದು ಗರ್ಜಿಸಲ್ಕೆ ನುಡಿದನಾಗಳು ॥ ೧ ॥ ಮಂದಮತಿಯಿದೇಕೆ ಮಾವ ಚಂದವಲ್ಲಿದು । ಇಂದು ನಿನ್ನ ಸುತೆಯನಿತ್ತು ಮುಂದೆ ಕಾವುದು ॥ ಒಂದು ತೃಣವ ಮುರಿದು ಸಾರ್ದೆನೊಂದು ಬಾರಿಗೆ । ಎಂದು ಪೇಳಲಾಗ ಭೂಪನೆಂದ ನಳಿಯಗೆ ॥ ೨ ॥ ಸಲುಗೆಯಿಂದಲೆಮ್ಮ ಕೆಣಕಿ ಬಲುಹ ನೋಳ್ಪೆಯ । ಲಲನೆ ಯಾಸೆ ಪಿಡಿದು ಬರಿದೆ ಕಲಹ ಮಾಳ್ಪೆಯ ॥ ಮಲೆತು ನಿಂದರೀಗ ನಿನ್ನ ಕೊಲುವೆನೆನುತಲೆ । ಸೆಳೆದು ಬಿಟ್ಟನಸ್ತ್ರಸಂಕುಲವನಾಗಲೆ ॥ ೩ ॥ ಎಸೆದ ಶರವ ತರಿದು ಮಾದ್ರವಸುಮತೀಶನು । ಪೊಸ ಶರೌಘದಿಂದಲವನ ಮುಸುಕು ತೆಂದನು ॥ ಕುಸುಮನೇತ್ರೆಗಾಗಿ ಪಂಥವೆಸಗಿ ಸುಮ್ಮನೆ । ವ್ಯಸನವಿಡಿದು ಸಾಯಬೇಡ ತೆರಳು ಧಿಮ್ಮನೆ ॥ ೪ ॥ ಎನುತಲೆಚ್ಚ ಶರವ ಕಂಡು ಕಮಲ ಭೂಪನು । ಕಿನಿಸಿನಿಂದಲದನು ತರಿವುತವನೊಳೆಂದನು ॥ ಇನಿತು ಗರ್ವ ಬಂತೆ ನಿನಗೆನುತ್ತ ರೋಷದಿ । ಕನಲಿ ಗರ್ಜಿಸುತಲೆಚ್ಚ ಸುಪ್ರತಾಪದಿ ॥ ೫ ॥ ಬಂದ ಶರವ ತರಿದು ನಡುವೆ ಕೌಂಡ್ಲಿಕಾಖ್ಯನು । ಮುಂದುವರಿವುತಾಗ ವಿಶಿಖದಿಂದಲೆಚ್ಚನು ॥ ಬಂದು ನೃಪನ ಜಠರಕಾಗಲಂದು ಬಡಿಯಲು । ಒಂದು ಕ್ಷಣದಿ ಮೂರ್ಛೆಯಿಂದಲೊರಗೆ ಧರೆಯೊಳು ॥ ೬ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಧರಣೀಶನಂದು ಮೂರ್ಛಿತನಾಗೆ । ಕಂಡು । ಹರಿಯ ಕುಮಾರಕನನು ವಾಗೆ ॥ ದುರುಳನ ಕೊಲ್ಲುವೆನೆನುತಲೆ । ಬಂದು । ಶರವಿಡಿದುಸರಿದನಾಗಲೆ ॥ ॥ ೧ ॥ ಎಲವೊ ಕೌಂಡ್ಲಿಕನೆ ನೀ ಗರ್ವದಿ । ಬಂದು । ಛಲವಿಡಿದೆಮ್ಮೊಳತ್ಯುಗ್ರದಿ ॥

ಲಲನೆಗೋಸುಗ ನಿನ್ನ ಪ್ರಾಣವ। ಕೊಡ । ದುಳುಹಿಕೊಳ್ಳೈನುತೆಚ್ಚ ಬಾಣವ॥ ॥ ೨ ॥ ಧುರಧೀರನಹುದೊ ನೀನೆಂಬುದ । ಹಿಂದೆ । ಹರನ ಕಣ್ಗಿಚ್ಚಿನಿಂದುರಿದುದ ॥ ಅರಿತಿಹೆನೆಂದವನಸ್ತ್ರವ । ಕಡಿ । ದುರುಳಿಚುತೆಚ್ಚನು ಶಸ್ತ್ರವ ॥ ೩ ॥ ಬರುವಸ್ತ್ರಗಳ ತರಿದೊಟ್ಟುತ । ಮಾದ್ರಾ । ಧರಣೀಶನಂದೌಡ ಕಚ್ಚುತ ॥ ಶರವನುಗಿದು ಬಿಡೆ ಧರೆಯೊಳು । ಬಿದ್ದ । ನಿರದೆ ಮನ್ಮಥ ತಾನು ಭರದೊಳು ॥ ॥ ೪ ॥ ಇಂತು ಕುಸುಮಬಾಣನೊರಗಲು । ಬಲು । ಚಿಂತೆಯಿಂ ಸುರರೆಲ್ಲ ಮರುಗಲು ॥ ಅಂತರಂಗದಿ ತಿಳಿವುತದರನು । ನರ । ರಂತೆ ಶ್ರೀಕೃಷ್ಣನಳಲ್ದನು ॥ ೫ ॥

ರಾಗ ನೀಲಾಂಬರಿ ರೂಪಕತಾಳ

ಏತಕೆ ಮಲಗಿದೆ ರಣದೊಳು । ಮಾತುಗಳಾಡದೆ ಸುಮ್ಮನೆ । ನೀತಿಯೆ ನಿನಗಿದು ನೋಡಲು । ಪ್ರೀತಿಯೆ ಸರ್ವರಿಗೆ ॥ ಪಾತಕಿಯುದರದಿ ನೀ ಬರಿ । ದೇತಕೆ ಜನಿಸಿದೆ ಕಲಹದಿ । ಘಾತಕಿ ಕೌಂಡ್ಲಿಕನಿಂದೆಮು । ಗೀ ತೆರನಾಯ್ತು ಕಟಾ ॥ ೧ ॥ ಇಂದುಧರನ ಸತ್ಕರುಣಗ । ಳಿಂದಲಿ ನಿನ್ನನು ಪಡೆದೆನು । ಬಂದುದು ನಿನಗೀ ವಿಧಿ ಶಿವ । ಮುಂದಿನ್ನೆಂತಹುದೊ ॥ ಚಂದಿರಬಿಂಬವ ಪೋಲುವ । ಕಂದನೆ ನಿನ್ನಯ ವದನವು । ಕಂದುತ ಕಾಂತಿಗಳೆಲ್ಲವು । ಕುಂದಿದುದೇಕಿನಿತು ॥ ೨ ॥

ಭಾಮಿನಿ

ಅವನಿಪತಿ ಕೇಳಿಂತು ಮಾನುಷ। ಭವದಿ ಜನಿಸಿದರಿಂದಲೀ ತ್ರೈ । ಭುವನವನು ರಕ್ಷಿಸುವ ಸಾಕ್ಷಾದ್ವಸ್ತುವೀ ತೆರದಿ ॥ ಕುವರನನು ನೆನೆವುತ್ತಲಂತ । ರ್ಯವನು ಕಾಣಿಸದಂತೆ ಮರುಗಲು । ತವಕದಿಂ ನಡೆತಂದು ಕೌಂಡ್ಲಿಕ ಹರಿಯೊಳಿಂತೆಂದ ॥ ೧ ॥

ರಾಗ ಕೇದಾರಗೌಳ ಅಷ್ಟತಾಳ

ಏತಕೆ ಮರುಗುವೆ ಹರಿಯೆ ನೀ ರಣದೊಳು । ರೀತಿಯಲ್ಲಿದು ನಿನಗೆ ॥ ಪ್ರೀತಿಯಿಂದುಸಿರುವೆ ಕಲಹಕಂಗಯ್ಸದೆ । ನೀ ತೆರಳೈ ಮನೆಗೆ ॥ ೧ ॥ ಮೊದಲೊಂದು ಬಾರಿ ಕಂಸಾಸುರನಾಗಿ ನಾ । ನುದಿಸಿದೆನವನಿಯೊಳು ॥ ಚದುರತೆಯಲಿ ಬಿಲ್ಲಹಬ್ಬದ ನೆವದಿಂದ। ಸದೆಬಡಿದೈಯೆನ್ನನು ॥ ೨ ॥ ಎರಡನೆ ಜನ್ಮದಿ ತವ ಭಗಿನಿಯೊಳಾನು । ತರಳನೆಂದೆನಿಸಿದೆನು ॥ ವರಚಕ್ರವ್ಯೂಹದೊಳೆನ್ನನು ಕೊಲಿಸಿದೆ । ಪರಮಘಾತಕಿಯೆ ನೀನು ॥ ೩ ॥ ಈಗ ಮಾದ್ರಾಧೀಶನುದರದಿ ಕೌಂಡ್ಲಿಕ । ನಾಗಿ ನಾ ಜನಿಸಿದೆನು ॥ ಬೇಗದಿ ರಣಕಿದಿರಾಗಿ ನೀ ನಿಲ್ಲೆನು । ತಾಗಲಾರ್ಭಟಿಸಿದನು ॥ ೪ ॥ ಎಂದ ಮಾತನು ಕೇಳುತಂದು ಮನದಲಿ

ಮು । ಕುಂದನು ಕೋಪ ತಾಳ್ದು ॥ ಇಂದು ನಿನ್ನನು ಸಂಹರಿಸದಿರೆ ನಾನೆಸು । ತೆಂದು ಚಕ್ರವ ಪಿಡಿದ ॥ ೫ ॥

ರಾಗ ದೇಶಿ ಮಟ್ಟೆತಾಳ

ಹರಿಯು ಕೋಪವ । ತಾಳಿ ಚಾಪವ । ಭರದಿ ಪಿಡಿದು ಝೇಂಕರಿಸುತ । ಲೆಸೆದನಸ್ತ್ರವ ॥ ೧ ॥ ಬರುವ ಶರವನು । ಕಾಣುತಾತನು । ತರಿದು ಪ್ರತಿ ಶರೌಘದಿಂದ । ಹರಿಯನೆಚ್ಚನು ॥ ೨ ॥ ಎಸೆದ ಬಾಣವು । ಮುಸುಕೆ ಹರಿಯನು । ಕುಸುಮನಾಭನಾಗ ಮೂರ್ಛೆ । ವಶದಿ ಬಿದ್ದನು ॥ ೩ ॥ ಹರಿಯು ಬೀಳಲು । ಹರನು ಖತಿಯೊಳು । ವರ ತ್ರಿಶೂಲಧಾರಿಯಾಗಿ । ಶರವನೆಸೆಯಲು ॥ ೪ ॥ ಹರನ ಶರದಲಿ । ಸೋಲದಾತನು । ಮರಳಿ ಪ್ರತಿಶರೌಘದಿಂದ । ಭರದೊಳೆಚ್ಚನು ॥ ೫ ॥ ಭಕ್ತನೀತನು । ಎಂಬ ಬಿರುದನು । ಯುಕ್ತಿಯಿಂದಲರಿವುತಾ ನಿ । ಶ್ಯಕ್ತನಾದನು ॥ ೬ ॥ ಹರನು ಮೂರ್ಛೆಗೆ । ಸಂದು ಮಲಗಿರೆ । ಸರಸಿಜೋದ್ಭವನು ಬಂದು । ಶರವ ಪಿಡಿದನು ॥ ೭ ॥

ರಾಗ ನಾದನಾಮಕ್ರಿಯೆ ಅಷ್ಟತಾಳ

ಬೊಮ್ಮನ ತಾ ಕಂಡು ಕೋಪದಿ । ಬಲು । ಹೆಮ್ಮೆಯಿಂದಲಿ ಸುಪ್ರತಾಪದಿ ॥ ನಮ್ಮೊಡನೀ ಪರಿ ಕಲಹಕೆ । ಬಂದ । ಹಮ್ಮ ನಿಲಿಸುವೆನು ನಿಮಿಷಕೆ ॥ ೧ ॥ ಎಂದು ಬೊಬ್ಬಿರಿದಾಗ ಕನಲುತ್ತ । ಶರ । ದಿಂದೆಸೆಯಲು ಕಿಡಿಮುಸಗುತ್ತ ॥ ಬಂದವನುರಕಾಗಿ ತಾಗಲು । ಮೂರ್ಛೆ । ಯಿಂದೊರಗಿದನವನಾಗಲು ॥ ೨ ॥ ವಾಣಿಯ ರಮಣನು ಬೀಳಲು । ಮತ್ತೆ । ಕಾಣುತ್ತ ಬಲರಾಮ ಖತಿಯೊಳು ॥ ಜಾಣತನದೊಳೆಮ್ಮ ಗೆಲಲೆಂದು । ಬಂದು । ಪ್ರಾಣವ ಕೊಡದಿರು ನೀನಿಂದು ॥ ೩ ॥ ಎಂದು ಮೂದಲಿಸುತ್ತ ಹಲಧರ । ಶರ । ವೊಂದೆಸೆಯಲು ಕಾಣುತ್ತ ಧೀರ ॥ ಸಂಧಿಸಿ ಬಾಣವ ಚಾಪದಿ । ತರಿ । ದಂದಗೆಡಿಸಿದನು ಕೋಪದಿ ॥ ೪ ॥ ಕಾಣುತ್ತಲಾ ಬಲಭದ್ರನು । ಸರ್ಪ । ಬಾಣವ । ಕೌಂಡ್ಲಿಕಗೆಚ್ಚನು ॥ ಮಾಣದೆ ಗರುಡಾಸ್ತ್ರದಿಂದಲಿ । ಸು । ತ್ರಾಣಿ ಗೆಲಿದನೊಂದೆ ಕ್ಷಣದಲಿ ॥ ೫ ॥ ಪರಿಪರಿಯಸ್ತ್ರವನೆಸೆವುತ್ತ । ಕಾದು । ತಿರಲಾಗ ಖಳನತಿ ಕನಲುತ್ತ ॥ ತರುಬಿ ಶರೌಘವನೆಸೆಯಲು । ನೀಲಾಂ । ಬರನಾಗ ಮೂರ್ಛೆಯೊಳೊರಗಲು ॥ ೬ ॥

ವಾರ್ಧಿಕ

ಧರಣಿಪತಿ ಲಾಲಿಸೈ ಹಲಧರನು ರಣದಿ ಮೈ । ಮರೆಯಲ್ಕೆ ಕಾಣುತುರಿ

ಮಸಗಿ ಬಹು ಕೋಪದಿಂ । ಸುರರೆಲ್ಲ ನಡೆತಂದು ನಿಲ್ಲಲಾಹವಕಾಗ ಕೌಂಡ್ಲಿ ಕಾಖ್ಯನು ಕಾಣುತ ॥ ಉರಿಯನುಗುಳುತಲೊಡನೆ ಮೂದಲಿಸುತವರನೊಂ। ದರೆಗಳಿಗೆಯೊಳು ಕೆಡಹಿ ಮುಂದಯ್ದಿ ಬರುತಿಪ್ಪ । ದುರುಳ ಮಾದ್ರಾಧಿಪನ ಕಂಡು ಗದೆಯಂ ತಿರುಹಿ ಮರುತಸುತನಿದಿರಾದನು ॥ ೧ ॥

ರಾಗ ಭೈರವಿ ಏಕತಾಳ

ಗದೆಯನು ತಿರುಹುತ ಬಂದು । ಖಳ । ನುದರವ ತಿವಿಯಲ್ಕಂದು ॥ ಕದನದಿ ವೈಮರೆದಾಗ । ನಿಮಿ । ಷದೊಳಿದ್ದನು ತಾ ಬೇಗ ॥ ೧ ॥ ಬಕನನು ಗೆಲಿದಂತಲ್ಲ । ನಿನ್ನ । ಯುಕುತಿಗೆ ಬೆದರುವುದಿಲ್ಲ ॥ ಶಕುತಿಯ ನೋಡೆಂ ದೆನುತ । ಕೌಂ । ಡ್ಲಿಕ ಶರವೆಚ್ಚನು ನಗುತ ॥ ೨ ॥ ಬರುವಸ್ತ್ರವ ಗದೆಯಿಂದ । ತರಿ । ದುರೆ ಗರ್ಜಿಸಿ ಖಳಗೆಂದ ॥ ತರುಣಿಯ ನೆವದಲಿ ಬಂದು । ಯಮ । ಪುರಕಯ್ದುವೆ ನೀನಿಂದು ॥ ೩ ॥ ಎಂದೆನುತಲಿ ಕಲಿಭೀಮ । ಗದೆ । ಯಿಂದೆರಗಲು ನಿಸ್ಸೀಮ ॥ ಒಂದು ಕ್ಷಣದಿ ಮೂರ್ಛೆಯೊಳು । ಬಲು । ನೊಂದೊರಗಿದ ಧರಣಿಯೊಳು ॥ ೪ ॥ ಏಳುತ ಖತಿಯಿಂದಾಗ । ಶರ । ವೇಳರನೆಸೆಯಲು ಬೇಗ ॥ ಬೀಳಲು ಮರುತಜ ನೊಂದು । ಯದು । ಪಾಳಿಯ ಮರುಗಿದು ದಂದು ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಮರುತಜ ರಣದೊಳು ಬೀಳಲು ಕಾಣುತ್ತ । ಧರಣಿಪ ಧರ್ಮಜನು ॥ ದುರುಳನ ಪರಿಯನೀಕ್ಷಿಪೆನೆಂದು ಕೋಪದಿ । ಶರವಿಡಿದಯ್ತಂದನು ॥ ೧ ॥ ಧರ್ಮಜ ಸಮರಕಯ್ತಂದುದ ಕಾಣುತ್ತ । ದುರ್ಮತಿ ಕೌಂಡ್ಲಿಕನು ॥ ಧರ್ಮವಿಲ್ಲಿವಗೆ ನಿಷ್ಕಪಟ ಪುಣ್ಯಾತ್ಮ ದು । ಷ್ಕರ್ಮಕ್ಕೆ ಗುರಿಯಾಹೆನು ॥ ೨ ॥ ಎಂದು ತಿಳಿದು ದೂರದಿಂದಲಿ ಯಮಸುತ । ಗೆಂದ ತಾ ನಮಿಸುತಲಿ ॥ ಸಂದೇಹವಿಲ್ಲದಯ್ತಂದಿರೇತಕೆ ರಣ । ಕೆಂದು ಮತ್ತುಸಿರಿದನು ॥ ೩ ॥ ಹಿರಿಯರು ನೀವು ಧರ್ಮಿಷ್ಠರು ನೋಡೆ ಸ । ತ್ಪುರುಷರಿಂದೆನ್ನೊಡನೆ ॥ ಧುರಕಿದಿರಾದರೆ ಬಹುದಪಕೀರ್ತಿಯು । ನರಕಭಾಜನವಾಹುದು ॥ ೪ ॥ ಎಂದು ನಾನಾ ಪರಿಯಿಂದ ಸಂಸ್ತುತಿಸಲಿ । ಕಂದು ಧರ್ಮಾತ್ಮಜನು ॥ ಅಂದವನೊಳು ಕಾದುಮಂದವ ಕಾಣದೆ । ಹಿಂದಕೆ ಮರಳಿದನು ॥ ೫ ॥

ಭಾಮಿನಿ

ಧರಣಿಪಾಲಕ ಲಾಲಿಸೀ ಪರಿ । ಧುರಕೆ ನಿಲುವರ ಕಾಣದೆಲ್ಲರು । ಮರುಗುತಿರೆ ಕಲಿ ಪಾರ್ಥ ಸ್ಮರಿಸಿದನಾಗ ಮಾರುತಿಯ ॥ ಬರಲವನ ಸತ್ಕರಿಸಿ ಕಪಿ

ಬಲು । ಭರದಿ ರಥವೇರುತ್ತ ಬಿಲು ಝೇಂ । ಕರಿಸುತಾರ್ಥಟೆಯಿಂದ ಕೌಂಡ್ಲಿಕಗೆಂದ ಮೂದಲಿಸಿ ॥ ೧ ॥

ರಾಗ ಭೈರವಿ ಅಷ್ಟತಾಳ

ದುರುಳ ಕೌಂಡ್ಲಿಕನೆ ಕೇಳು । ಸಂಗರದಲಿ । ಹರಿ ಹರ ಸುರಪರೊಳು ॥ ಮೆರೆಸಿದೆ ಪಂಥವನೆಂದು ಗರ್ವಿಸದಿರು । ಬರಿ ಬಯಲಾಸೆಯೊಳು ॥ ೧ ॥ ಎನುತುರಗಾಸ್ತ್ರವನು । ಬಿಡಲು ಕಂಡು । ಕನಲುತ್ತ ಕೌಂಡ್ಲಿಕನು ॥ ಕ್ಷಣ ದೊಳು ಗರುಡಾಸ್ತ್ರದಿಂದ ಖಂಡಿಸುತಲಿ । ಕಿನಿಸಿನೊಳಿಂತೆಂದನು ॥ ೨ ॥ ಧೀರ ನೀನಾಗಿರಲು । ನಪುಂಸಕ । ನಾರಿಯಾಕಾರದೊಳು ॥ ಸೇರಿ ವಿರಾಟನ ಪುರದೊಳು ಮೆರೆದಿಹ । ವಾರತೆ ಕೇಳಿಹೆನು ॥ ೩ ॥ ಎಂದದ್ರಿಬಾಣವನು । ಬಿಡಲು ವಜ್ರ । ದಿಂದ ತರಿವುತೆಂದನು ॥ ಇಂದುಮುಖಿಯ ನೆವದಿಂದ ನೀ ಕಲಹಕೆ । ನಿಂದು ಸಾಯದಿರೆಲವೊ ॥ ೪ ॥ ಎಂದಗ್ನಿಬಾಣವನು । ಬಿಡಲು ಕಾಣು । ತಂದು ಜಲಾಸ್ತ್ರವನು ॥ ಸಂಧಿಸಿ ಚಾಪವ ಬಿಡಲುರಿಯಡಗಲಿಂ । ತೆಂದನು ಪಾರ್ಥನೊಳು ॥ ೫ ॥ ಗುರು ಭೀಷ್ಮಾದಿಗಳ ಹಿಂದೆ । ರಣಾಗ್ರದಿ । ಮರೆಮೋಸದಿಂದ ಕೊಂದೆ ॥ ಪರಮಪಾತಕಿ ನಿನ್ನ ಪರಿಯ ನಾ ಬಲ್ಲೆನೆಂ । ದಿರದೆಚ್ಚ ನರನಿಗಂದು ॥ ೬ ॥

ಭಾಮಿನಿ

ಹಲವು ಮಂತ್ರಾಸ್ತ್ರಗಳ ಬಿಡಲದ । ಗೆಲಿದು ಕೌಂಡ್ಲಿಕ ಮೆರೆವುತಿರಲಾ । ಫಲುಗುಣನು ಚಿಂತಿಸಿದನಚ್ಚರಿಗೊಳುತ ಮನದೊಳಗೆ ॥ ಇಳೆಯಪಾಲಕ ರೆನ್ನೊಳೀ ಪರಿ । ಕಲಹದೊಳು ಜಯಿಸಿದುದ ಕಾಣೆನು । ನಳಿನನಾಭನು ಮುನಿದನಿಂದಿಗೆನುತ್ತಲಳಲಿದನು ॥ ೧ ॥

ರಾಗ ಸಾಂಗತ್ಯ ರೂಪಕತಾಳ

ಹರ ಹರ ಸಮರದಿ ಕೈಸೋತೆನಲ್ಲ ನಾ । ನಿರದೆ ಕೌಂಡ್ಲಿಕನೊಡನಿಂದು ॥ ಧುರಧೀರ ನಾನೆಂದು ಜಗದಿ ಕೊಂಡಾಡುವ । ಬಿರುದೆತ್ತಲಡಗಿತು ಶಿವನೆ ॥ ॥ ೧ ॥ ಸಾರಥಿಯಿಲ್ಲದೆ ಕೆಟ್ಟೆನಲ್ಲಯ್ಯೊ ನಾ । ನೀ ರೀತಿಯಿಂದಕಟಕಟಾ ॥ ಮೂರುಲೋಕದೊಳೆಲ್ಲ ಧೀರ ತಾನೆಂದೆಂಬ । ವಾರತೆ ಕೊಂಡಾಡುತಿಹರು ॥ ॥ ೨ ॥ ಮಾತೆಗೋಸುಗ ಪುರಂದರನೈರಾವತವನೀ । ಭೂತಳಕಿಳಿಸಿ ತಂದಿ ಹೆನು ॥ ಸೋತವನಿಪರು ಬಿಟ್ಟಿಹ ಧನುವೆತ್ತಿ ಸಂ । ಪ್ರೀತಿಯಿಂ ಗೆಲಿದೆ ದ್ರೌಪದಿಯ ॥ ೩ ॥ ಹರನ ಮೆಚ್ಚಿಸಿ ಪಡೆದಿಹೆ ಪಾಶುಪತವೆಂಬ । ಶರವನ್ನು

ಸಮರದೊಳಾನು ॥ ತುರುವಿಗೋಸುಗ ಕುರುಕುಲವನ್ನು ಜಯಿಸಿದೆ । ದುರುಳ ರಕ್ಕಸರ ಮರ್ದಿಸಿದೆ ॥ ೪ ॥ ಎಂದು ನಾನಾ ಪರಿಯಿಂದ ದುಃಖಿಸುತಿರ । ಲಂದು ಕಃಣಾತ ಮಾದ್ರಾಧಿಪನು ॥ ಮುಂದುವರಿದು ನಡೆತಂದು ಪಾರ್ಥನ ಜರೆ । ದೆಂದನು ಕನಲಿ ಗರ್ಜಿಸುತ ॥ ೫ ॥

ರಾಗ ಭೈರವಿ ಮಟ್ಟೆತಾಳ

ಪಾರ್ಥನೆಂಬ ಬಿರುದ ನೀನು । ವ್ಯರ್ಥ ಕಳೆದೆಲಾ ॥ ಧೂರ್ತತನದೊಳಾತ್ಮಸ್ತುತಿಯ । ಕೀರ್ತಿಸುವೆ ಭಲಾ ॥ ೧ ॥ ನಿನ್ನ ಸಲಹುತಿರುವ ಹರಿಯು । ಮುನ್ನ ಸೋತನು ॥ ಇನ್ನು ತಡೆಯಲೇಕೆ ತೋರು । ನಿನ್ನ ಬಲುಹನು ॥ ॥ ೨ ॥ ಎಂದು ಮೂದಲಿಸಲು ಪಾರ್ಥ । ನಂದು ಖತಿಯೊಳು ॥ ನಿಂದು ರಣಕೆ ಚಾಪ ಪಿಡಿವು । ತೆಂದನವನೊಳು ॥ ೩ ॥ ಕುಸುಮನೇತ್ರನನ್ನು ಜಯಿಸಿ । ದಸಮ ಬಲವನು ॥ ಕುಸುರಿದರಿವೆನೆನುತಲಸ್ತ್ರ । ವಿಸರವೆಸೆದನು ॥ ೪ ॥ ಬರುವ ಶರವ ಕೌಂಡ್ಲಿಕಾಖ್ಯ । ತರಿವುತಾ ಕ್ಷಣ ॥ ಮರಳಿ ಶರವನೆಸೆಯೆ ಮೆಯ್ । ಮರೆದ ಫಲುಗುಣ ॥ ೫ ॥

ಭಾಮಿನಿ

ವೀರ ಪಾರ್ಥನು ಬೀಳೆ ರಣದಲಿ । ಧೀರ ಕೌಂಡ್ಲಿಕ ಮೆರೆವುತಿರಲದ । ನಾರಿ ದ್ರುಪದಾತ್ಮಜೆಯು ಕಾಣುತಲಧಿಕ ರೋಷದಲಿ ॥ ಘೋರ ಪಾತಕಿಯಿವನ ಕೆಡಹುತ । ಮಾರಿಗೌತಣವೀವೆನೆನುತಲೆ । ಕ್ರೂರ ಚಂಡಿಯು ರೂಪವಾಂತಳು ಜವದಿ ಬೊಬ್ಬಿಡುತ ॥ ೧ ॥

ರಾಗ ಮಾರವಿ ಏಕತಾಳ

ಘೋರಾಕಾರವ ತಾಳುತ ರೌದ್ರದೊ । ಳಃರುಭಟಿಸುತಾಗ । ನಾರಿಯು ರೂಪದಿ ಭೋರಿಡುತಯ್ತರೆ । ಧಾರಿಣಿ ಕಂಪಿಸಿತು ॥ ೧ ॥ ಚಂಡಿಯು ರೂಪವನೀಕ್ಷಿಸುತಾ ಕ್ಷಣ । ಕೌಂಡ್ಲಿಕ ಭೂಪತಿಯು ॥ ಭಂಡರ ತೆರದೊಳಗೋಡುತಲಿರಲದ । ಕಂಡವಳುಸಿರಿದಳು ॥ ೨ ॥ ಎಲ್ಲಿಗೆ ಪೋಗುವೆ ತಲ್ಲಣಗೊಳುತಲಿ । ನಿಲ್ಲೆಲೊ ಪಾತಕಿಯೆ ॥ ಎಲ್ಲರ ಗೆಲಿದಂತಲ್ಲ ರಣಾಗ್ರದಿ । ಕೊಲ್ಲುವೆ ನಿನ್ನವನು ॥ ೩ ॥ ಎಂದೆನುತಾ ಕ್ಷಣ ಬಂದತಿ ರೋಷದಿ । ಮುಂದಲೆಯನು ಪಿಡಿದು ॥ ಮಂದಮತಿಯ ಸದೆಬಡೆವೆನೆನುತಲಿರ । ಲಂದವನಳಲಿದನು ॥ ೪ ॥

ರಾಗ ನೀಲಾಂಬರಿ ಏಕತಾಳ

ಹರ ಹರಾ ರಣದೊಳಾನು । ಜಯಿಸಿದೆನಿಂದು । ಧರಣಿಪರೆಲ್ಲರನು ॥

ತರುಣಿಯು ಕರದೊಳಗೆ । ಸುಮ್ಮನೆ ಸಿಕ್ಕಿ । ಸರಿವುದಾಯ್ತೆಮುಪುರಿಗೆ ॥ ೧ ॥ ಏತಕಿಲ್ಲಿಗೆ ಬಂದೆನು । ಪಂಥವ ಮಾಡಿ । ಭೂತಳಾಧಿಪರೊಳಾನು ॥ ಪಾತಕ ಕೊಳಗಾದೆನು । ಭವ ವಿರಿಂಚಿ ಶ್ರೀ । ನಾಥರ ಗೆಲ್ದು ತಾನು ॥ ೨ ॥ ಆವ ಜನ್ಮದ ಫಲದಿ । ಹೆಂಗುಸಿನೊಳು । ಸಾವುದಾಯ್ತಾ ತೆರದಿ ॥ ಕಾವ ದೇವರ ಕರುಣ । ತಪ್ಪಿದ ಮೇಲಿ । ನ್ನಾವ ದೊಡ್ಡಿತು ಮರಣ ॥ ೩ ॥

ಭಾಮಿನಿ

ಧಾರಿಣೀಪತಿ ಕೇಳು ಬಳಿಕಾ । ಭೂರಿ ರೋಷದಿ ದ್ರುಪದನಂದನೆ । ವೀರ ಕೌಂಡ್ಲಿಕನುರವ ಬಗಿದಾ ಭೂತಗಣಗಳಿಗೆ ॥ ಪಾರಣೆಯ ಗೆಯ್ಸುತ್ತ ಮತ್ತಾ । ಘೋರರೂಪವನುಳಿದು ರಣದಲಿ । ಮಾರುತಿಯು ಕುಳ್ಳಿರಲು ಕರೆದಿಂತೆಂದ ಳವನೊಡನೆ ॥ ೧ ॥

ರಾಗ ಭೈರವಿ ಝಂಪೆತಾಳ

ಕೇಳಯ್ಯ ಹನುಮಂತ । ಶೀಲಸದ್ಗುಣವಂತ । ಕಾಲಕರ್ಮವಿದೂರ । ಕಾಳಗದಿ ಶೂರ ॥ ೧ ॥ ರಣದಿ ಕೌಂಡ್ಲಿಕನೊಡನೆ । ಸೆಣಸಿ ಮೂರ್ಛಿಸಿದ ಫಲು । ಗುಣ ಹರಿಹರಾದ್ಯಮರ । ಗಣಸಹಿತಲಿಂದು ॥ ೨ ॥ ಇವರ ಜೀವಿ ಸುವ ಯ । ತ್ನವ ಕಾಣೆ ಬದಲೇನು । ತವ ಕರುಣವಿರಲು ಬದು । ಕುವರು ತತ್‌ಕ್ಷಣದಿ ॥ ೩ ॥ ಹಿಂದೆ ಲಂಕೆಯಲಿ ರಘು । ನಂದನನ ಮಾರ್ಬಲವ । ನಿಂದ್ರಾರಿ ಕಪಟದಲಿ । ಕೊಂದ ವೇಳೆಯೊಳು ॥ ೪ ॥ ತಂದು ಸಂಜೀ ವಿನಿಯೊ । ಳಂದವರನೆಬ್ಬಿಸಿದೆ । ಇಂದು ನೀ ಹೊರತನ್ಯ । ರಿಂದಲೇ ನಹುದು ॥ ೫ ॥

ರಾಗ ಕೇದಾರಗೌಳ ಅಷ್ಟತಾಳ

ಇಂತು ದ್ರೌಪದಿ ಪೇಳಿದಂತರವರಿತಾಗ । ಸಂತಸದಲಿ ಬಳಿಕ ॥ ಪಿಂತಣ ತೆರದಲೌಷಧನನೆ ತರುವೆ ಶ್ರೀ । ಕಾಂತನ ಕರುಣದಲಿ ॥ ೧ ॥ ಎಂದು ಪಾಂಚಾಲೆಯೊಳುಸಿರುತ್ತಲಾ ಕ್ಷಣ । ಗಂಧವಾಹಾತ್ಮಜನು ॥ ನಿಂದು ರಾಮನ ಸ್ತುತಿಸುತ ಬೆಳೆದಾ ಕ್ಷಣ । ದಿಂದ ಕ್ಷೀರಾಂಬುಧಿಗೆ ॥ ೨ ॥ ಅಲ್ಲಿ ಗಯ್ತಂದು ತಾನರಸಲು ಕಂಡನು । ಚೆಲ್ವ ಮಹೌಷಧಿಯ ॥ ಮೆಲ್ಲನೆ ಕೊಂಡದ ಮರಳಿದನಾ ಕ್ಷಣ । ಫುಲ್ಲನಾಭನ ದೂತನು ॥ ೩ ॥ ದ್ರುಪದ ತನುಜೆ ಕಂಡು ಹರುಷದೊಳಾತನ । ನುಪಚರಿಸುತಲೆಂದಳು ॥ ನಿಪುಣ ನಿನ್ನಯ ಬಾಲತುದಿಗದ್ದುತಿವರ ಜೀ । ವಿಪುದಯ್ಯ ವೀರ ನೀನು ॥ ೪ ॥

ದ್ವಿಪದಿ

ಇಂತೆಂದು ದ್ರೌಪದಿಯು ಪೇಳುತಿರಲಾಗ । ಸಂತಸದೊಳೌಷಧವ ತಾ ತಂದು ಬೇಗ ॥ ೧ ॥ ಅರೆದು ಬಾಲದೊಳದ್ದಿ ಬಿದ್ದವರಿಗೆಲ್ಲ । ಪರಮ ಸಂಜೀವಿನಿಯ ತಾನಿತ್ತನಲ್ಲ ॥ ೨ ॥ ನಿದ್ದೆಗೆಯ್ದವರು ತಮ್ಮೊಳಗೆಯೆಚ್ಚತ್ತರ್ । ಎದ್ದ ತೆರದೊಳಗೇಳಲಾಶ್ಚರ್ಯವಾಯ್ತು ॥ ೩ ॥ ಧನುಶರಾಯುಧವಿಡಿದು ನೋಡಿದರು ಸುತ್ತ । ಕನಸು ಬಿದ್ದಂತಾಗೆ ಕೇಳಿದರು ಮತ್ತ ॥ ೪ ॥ ಕೌಂಡ್ಲಿಕನ ದೇಹ ಬಿದ್ದಿಹುದು ರಣದೊಳಗೆ । ಚಂಡವಿಕ್ರಮರಾರು ಕೊಂದರೀ ಖಳಗೆ ॥ ೫ ॥ ಎಂದು ತಮ್ಮೊಳು ಮಾತನಾಡುತಿರಲಾಗ । ಬಂದು ಹರಿಯೊಳು ಯಮಜ ತಾನೆಂದ ಬೇಗ ॥ ೬ ॥

ರಾಗ ಮಾಧವಿ ಏಕತಾಳ

ದೇವ ಲಾಲಿಪುದು ನಾ ಪೇಳ್ವ ಬಿನ್ನಪವ । ಭೂವರ ಕೌಂಡ್ಲಿಕನುರು ಪರಾಕ್ರಮವ ॥ ೧ ॥ ನೀವೆಲ್ಲ ಸೋತಿರೆಂದೆನುತಲರ್ಜುನನು । ತಾವೊಬ್ಬನುಳಿಯಲೇಕೆನುತ ಕಾದಿದನು ॥ ೨ ॥ ಆ ಪಾರ್ಥ ಸೋತು ಮೆಯ್ಮರೆಯೆ ತಾ ಕಂಡು । ದ್ರೌಪದಿ ಖಳನ ಕಾಣುತ ಖತಿಗೊಂಡು ॥ ೩ ॥ ಚಂಡಿರೂಪವನಾಂತು ಕನಲುತಯ್ತಂದು । ಕೌಂಡ್ಲಿಕನನು ಕದನದೊಳುರೆ ಕೊಂದು॥ ॥ ೪ ॥ ಆ ಪತಿವ್ರತೆಯುವನನು ಭೂತಗಣಕೆ । ಕೋಪದಿ ತೃಪ್ತಿಬಡಿಸಿದಳು ಕ್ಷಣಕೆ ॥ ೫ ॥ ಮುನ್ನಿನ ರೂಪವನಾಂತು ಮಾರುತಿಯ । ಕನ್ಯೆ ತಾ ಕರೆದು ಪೇಳಿದಳೊಂದ್ಯುಕುತಿಯ ॥ ೬ ॥ ಇನ್ನು ತಡೆಯುಲೇಕೌಷಧಿಯನು ತಂದು । ಚೆನ್ನಾಗಿ ಜೀವಿಸವರನೀಗಲೆಂದು ॥ ೭ ॥ ಪೇಳಲಿಕಾ ಸಂಜೀವಿನಿಭೇಷಜವನು । ಗಾಳಿಯಣುಗ ಪೂಸಿ ತಾನೆಬ್ಬಿಸಿದನು ॥ ೮ ॥ ಮಂದರಧರ ನಿನ್ನ ಮಹಿಮೆಯಿದೆಲ್ಲ । ಇಂದಿಗೆಮ್ಮಿಷ್ಟಾರ್ಥ ಸಿದ್ಧಿಸಿತಲ್ಲ ॥ ೯ ॥

ರಾಗ ಸೌರಾಷ್ಟ್ರ ತ್ರಿವುಡೆತಾಳ

ಯಮಜನೆಂದುದ ಕೇಳುತಾ ಕ್ಷಣ । ಕಮಲನಾಭನು ಕರೆಯೆ ಮದಗಜ । ಗಮನೆ ದ್ರೌಪದಿ ಬಂದು ಚರಣಕೆ । ನಮಿಸುತಿರಲು ॥ ೧ ॥ ಹರ ವಿರಿಂಚಾದಿಗಳು ಮತ್ತಾ । ಪರಮಋಷಿಗಳು ದಿವಿಜರೆಲ್ಲರು । ಹರಿಯೊಳಪ್ಪಣೆಗೊಂಡು ತಮ್ಮಯ । ಪುರಕೆ ತೆರಳೆ ॥ ೨ ॥ ಬಳಿಕ ಲಕ್ಷ್ಮೀರಮಣ ಯಾದವ । ಬಲದೊಡನೆ ದ್ವಾರಕೆಗೆ ಬಂದತಿ । ಗೆಲವಿನಿಂದಲಿ ರಂಜಿಸಿದ ಕೇ । ಳಿಯು ಪಾಲ ॥ ೩ ॥

ಭಾಮಿನಿ

ಪರಮಪಾವನ ಪುಣ್ಯವೀ ಶುಭ । ಚರಿತೆಯನು ಕೀರ್ತಿಸುತ ಕೇಳುವ । ಶರಣಜನರಾಪತ್ತುಗಳ ಪರಿಹರಿಸುತನವರತ ॥ ಕರುಣಿಸುವ ಮನದಿಷ್ಟವನು ಶ್ರೀ । ಹರಿಯೆನುತ ಜನಮೇಜಯಂಗಾ । ಪರಮ ವೈಶಂಪಾಯಮುನಿಪತಿ ಪೇಳ್ದನೀ ಕಥೆಯ ॥ ೧ ॥

ಮಂಗಲ

ರಾಗ ಧವಳಾರ ಆದಿತಾಳ

ಮಂಗಲಂ ಜಯ ಮಂಗಲಂ ॥ ಪ ॥ ಮತ್ಸ್ಯವತಾರಗೆ ಕೂರ್ಮನಿಗೆ । ಉತ್ತಮ ವರಹಗೆ ನರಹರಿಗೆ ॥ ಮತ್ತೆ ವಾಮನನಾಗಿ ಬಲಿಯ ವಂಚಿಸಿದಗೆ । ಕ್ಷತ್ರಿಕುಲಾಂತಕ ರಾಮನಿಗೆ ॥ ಮಂಗಲಂ ॥ ೧ ॥ ದಶಕಂಠನ ಸಂಹರಿಸಿದಗೆ । ಕುಸುಮಬಾಣನ ಪಿತ ಕೃಷ್ಣನಿಗೆ ॥ ವಸನವ ನೆಗಹಿದ ಬೌದ್ಧವತಾರಗೆ । ಪೊಸತುರಗವನೇರ್ದ ಕಲ್ಕ್ಯನಿಗೆ ॥ ಮಂಗಲಂ ॥ ೨ ॥ ಮಂಗಲ ವೇಂಕಟರಮಣನಿಗೆ । ಮಂಗಲ ಸಂಕಟಹರಣನಿಗೆ ॥ ಮಂಗಲ ಮೂಕಾಂಬಿಕೆ ಸರ್ವೇಶಗೆ । ಮಂಗಲ ಶ್ರೀಲೋಕನಾಥನಿಗೆ ॥ ಮಂಗಲಂ ಜಯ ಮಂಗಲಂ ॥ ೩ ॥

ಯಕ್ಷಗಾನ ರತಿಕಲ್ಯಾಣ ಮುಗಿದುದು

ಪಾವಂಜೆ ಗುರುರಾವ್ ಅಂಡ್ ಸನ್ಸ್ ಇವರಿಂದ ಉಡುಪಿ ಶ್ರೀಕೃಷ್ಣಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯದಲ್ಲಿ ಪ್ರಕಟಿಸಲ್ಪಟ್ಟಿತು.
S. ೧೧೭/O. 393 ೨೦೦೦—3-1957.

ಕನ್ನಡ ಪ್ರಸಂಗ ಪುಸ್ತಕಗಳು

ಧ್ರುವಚರಿತ್ರೆ	೦.೪೦
ಸಮುದ್ರಮಥನ	೦.೩೨
ವೃತ್ರಾಸುರಕಾಳಗ	೦.೪೦
ಗಿರಿಜಾಕಲ್ಯಾಣ	೦.೩೨
ಹಿರಣ್ಯಾಕ್ಷವಧೆ	೦.೨೫
ಪ್ರಹ್ಲಾದಚರಿತ್ರೆ	೦.೩೨
ರತ್ನಾವತೀಕಲ್ಯಾಣ (ದೃಢವರ್ಮಕಾಳಗ)	೦.೩೨
ಅಂಬರೀಷಚರಿತ್ರೆ	೦.೧೩
ಭಸ್ಮಾಸುರಮೋಹಿನಿ	೦.೨೦
ಶ್ರೀಕೃಷ್ಣಬಾಲಲೀಲೆ	೦.೩೫
ಬಿಲ್ಲಹಬ್ಬ ಕಂಸವಧೆ	೦.೩೨
ರೇವತೀಕಲ್ಯಾಣ	೦.೫೦
ಯಾದವಾಭ್ಯುದಯ	೦.೩೮
ಚಂದ್ರಾವಳೀಪ್ರಸಂಗ	೦.೩೨
ರುಕ್ಮವತೀಕಲ್ಯಾಣ (ಪಾರಿಜಾತಾಪಹಾರ)	೦.೩೮
ಪಾರಿಜಾತಪ್ರಸಂಗ (ನರಕಾಸುರವಧೆ)	೦.೩೫
ಶ್ರೀಕೃಷ್ಣವಿವಾಹ	೦.೩೨
ಜಾಂಬವತೀಕಲ್ಯಾಣ, ಸತ್ಯಭಾಮಾಪರಿಣಯ	೦.೩೫
ಕನಕಾಂಗಿಕಲ್ಯಾಣ	೦.೩೨
ಚಂದ್ರಹಾಸಚರಿತ್ರೆ	೦.೨೫
ಲಕ್ಷಣಾಕಲ್ಯಾಣ (ದುರ್ಯೋಧನಗರ್ವಾಪಹಾರ)	೦.೩೮
ಬಾಣಾಸುರನ ಕಾಳಗ (ಉಷಾಪರಿಣಯ)	೦.೩೮
ಶ್ರೀಕೃಷ್ಣದಿನಾಶ್ವಮೇಧ	೦.೨೫
ವಾಮನಚರಿತ್ರೆ	೦.೩೨
ಕುಮುದ್ವತೀಕಲ್ಯಾಣ	೦.೩೮

ಪಾವಂಜೆ ಗುರುರಾವ್ ಅಂಡ್ ಸನ್ಸ್
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ ಉಡುಪಿ